# ಮೊದಲ ಮಾತು

ಡಾ. ಆ. ನೇ. ಉಪಾಧ್ಯೆಯವರ ಜೀವನ ಸಾಧನೆ ಈ ವಿಷಯದ ಮೇಲೆ ವಿಶೇಷ ಉಪನ್ಯಾಸಗಳನ್ನು ನೀಡಲು ಮೈಸೂರು ವಿಶ್ವವಿದ್ಯಾನಿಲಯದ ಜೈನ ಶಾಸ್ತ್ರ ವಿಭಾಗದ ಮುಖ್ಯ ಸ್ಥರಾಗಿದ್ದ ಡಾ. ಎಂ. ಡಿ. ವಸಂತರಾಜ ಅವರ ಮುಖಾಂತರ **1985** ರಲ್ಲಿ ಆಮಂತ್ರಣ ಬಂದಿತು. ಸಂತೋಷದಿಂದ ಒಪ್ಪಿ ಕೊಂಡೆ. ಸಪ್ಟೆಂಬರ್ **1986** ರಲ್ಲಿ ಉಪನ್ಯಾಸಗಳ ಕಾರ್ಯಕ್ರಮವನ್ನು ನಿರ್ಧರಿಸಲಾಗಿತ್ತು. ಆದರೆ ಹೊರಡುವ ಪೂರ್ವದಲ್ಲಿಯೇ ಒಮ್ಮೆಲೆ ಅಸ್ವಾಸ್ಥ್ಯ ಬಂದೊದಗಿ ಉಪನ್ಯಾಸಗಳು ಹಾಗೆಯೇ ಉಳಿದವು.

ತರುವಾಯ ಕರ್ನಾಟಕ ವಿಶ್ವವಿದ್ಯಾಲಯದ ಜೈನಪೀಠದ ವಾರ್ಷಿಕ ವಿಶೇಷ ಉಪನ್ಯಾಸಗಳ ಯೋಜನೆಯನ್ವಯ ಇದೇ ವಿಷಯದ ಮೇಲೆ ಉಪನ್ಯಾಸ ನೀಡುವಂತೆ ಜೈನಶಾಸ್ತ್ರ ವಿಭಾಗದ ಕಾರ್ಯನಿರ್ವಾಹಕ ಅಧ್ಯಕ್ಷ ಡಾ. ಎಸ್. ಪಿ. ಪಾಟೀಲ ರಿಂದ ಆಮಂತ್ರಣ ಬಂದಿತು. ಫೆಬ್ರವರಿ **1992** ರಲ್ಲಿ ಉಪನ್ಯಾಸಗಳ ಕಾರ್ಯಕ್ರಮ ನಿರ್ಧರಿಸಲಾಯಿತು. ಎಲ್ಲ ಸಿದ್ದತೆ ಮಾಡಿ ಹೊರಡುವಷ್ಟರಲ್ಲಿ ಮತ್ತೆ ಇನ್‌ಫ್ಲೂಎಂಜಾ ಆವರಿಸಿತು. ತಂತಿ ಕಳಿಸಿ, ಉಪನ್ಯಾಸಗಳನ್ನು ಮುಂದುಡಲೂ ಕೇಳಿಕೊಂಡೆ. ಮರುವರ್ಷವೂ ಅವರಿಂದ ಆಮಂತ್ರಣ ಬಂದರೂ ಅನಾರೋಗ್ಯದ ಮೂಲಕ ಪ್ರವಾಸ ಕೈಕೊಳ್ಳಲು ಸಧ್ಯವಾಗದಾಯಿತು. ಹೀಗಾಗಿ ಉಪನ್ಯಾಸಗಳಿಗಾಗಿ ಸಿದ್ದಪಡಿಸಿದ ಹಸ್ತಪ್ರತಿ ಹಾಗೆ ಉಳಿಯಿತು.

ಡಾ. ಆ. ನೇ. ಉಪಾಧ್ಯೆ ಅವರ ವಿಶಿಷ್ಠ ಪ್ರಕಾರದ ಜೀವನ ಮತ್ತು ಸಾಧನೆಯ ಬಗ್ಗೆ ಅನೇಕ ಸಂಗತಿಗಳು ವಿದ್ವಾಂಸರಿಗೂ, ಅವರ ಅಭಿಮಾನಗಳಿಗೂ ತಿಳಿದಿಲ್ಲ. ಈ ಉಪನ್ಯಾಸಗಳಲ್ಲಿ ಅಂಥವುಗಳ ಮೇಲೆ ವಿಶೇಷ ಬೆಳಕು ಚೆಲ್ಲಲಾಗಿದೆ. ಇದು ಜೈನಶಾಸ್ತ್ರ ಪ್ರಾಕೃತ ಕ್ಷೇತ್ರಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೂ, ವಿದ್ವಾಂಸರಿಗೂ, ಸಂಶೋಧಕರಿಗೂ ಉಪಯುಕ್ತವಾಗಲಿರುವ ಬಗ್ಗೆ ನನಗೆ ತುಂಬ ವಿಶ್ವಾಸವಿದೆ.

ಡಾ. ಉಪಾಧ್ಯೆ ಅವರಂಥ ವಹಾನ್ ವಿದ್ವಾಂಸರ ಸಾಧನೆಯ ಬಗ್ಗೆ ಕೇವಲ ಕೇಳಿ, ಓದಿ ಸುಮ್ಮನೆ ಉಳಿದರೆ ಸಾಲದು. ಅವರ ಕಾರ್ಯವನ್ನು ಮುಂದುವರಿಸಿಕೊಂಡು ಹೋಗುವುದು ಜೈನಶಾಸ್ತ್ರ ಪ್ರಾಕೃತ ಕ್ಷೇತ್ರದಲ್ಲಿಯ ವಿದ್ವಾಂಸರ, ವಿದ್ಯಾರ್ಥಿಗಳ ಕರ್ತವ್ಯವಾಗಬೇಕು. ಈ ಬಗೆಗಿನ ಅವರ ಅಶಯವನ್ನೇ ಉಲ್ಲೇಖಿಸಬಹುದಾಗಿದೆ :

“ ಷಟ್ ಖಂಡಾಗಮ” ದ ಟೀಕಾ ಗ್ರಂಥಗಳು ಜೈನಶಾಸ್ತ್ರದ ಅಥವಾ ಜೈನವಿದ್ಯೆಯ ಮಹತ್ವದ ಸೊತ್ತು. ಅವುಗಳ ವಿಶಾಲ ಗಾತ್ರ ಮತ್ತು ಸಂಸ್ಕೃತ ಪ್ರಾಕೃತ ಮಿಶ್ರಿತ (ಮಣಿಪ್ರವಾಳ) ಭಾಷಾಶೈಲಿಯ ಮೂಲಕ ಈಗಿನ ವಿದ್ವಾಂಸರು ಅವುಗಳ ಆಳವಾದ ಅಧ್ಯಯನಕ್ಕೆ ಮುಂದಾಗಲು ಹಿಂಜರಿಯುತ್ತಾರೆ. ಈ ಸ್ಥಿತಿ ಮುಂದುವರಿದದ್ದಾರೆ ಮುಂದಿನ ಪೀಳಿಗೆಯ ವಿದ್ವಾಂಸರು ಆ ಗ್ರಂಥಗಳ ಮೇಲಿನ ಧೂಳನ್ನೂಕೂಡ ಜಾಡಿಸಲು ಹೋಗರು. ಆದ್ದರಿಂದ ಜೈನ ವಿದ್ಯಾ ಕ್ಷೇತ್ರಕ್ಕೆ ತುಂಬಲಾಗದ ಹಾನಿ ತಟ್ಟುವ ಸಂಭವವಿದೆ. ಇದನ್ನರಿತು, ಈ ಕ್ಷೇತ್ರದಲ್ಲಿಯ ವಿದ್ವಾಂಸರು, ವಿದ್ಯರ್ಥಿಗಳು ಯು.ಜಿ. ಸಿ. ಸಂಶೋಧನ ಯೋಜನೆಗಳಡಿಯಲ್ಲಿ ಷಟ್ ಖಂಡಾಗಮದ ಟೀಕಾಗ್ರಂಥಗಳ ಅಧ್ಯಯನ ಅನುಸಂಧಾನಗಳ ಕಾರ್ಯಕ್ರಮ ರೂಪಿಸಿ, ದುಡಿದದ್ದಾದರೆ, ಜೈನಶಾಸ್ತ್ರ ಸಾಗರ ದಡಿಯಲ್ಲಿನ ಅನೇಕ ಅನರ್ಘ್ಯ ರತ್ನಗಳು ಕೈಗೆ ಸಿಗದಿರವು”.

ಇಂಥ ಕಾರ್ಯಕ್ಕೆ ಈ ಕೃತಿ ಪ್ರೇರಣೆ ನೀಡಿದಲ್ಲಿ ನನಗೆ ಸಂತೋಷ.

ವಿಶೇಷ ವಾರ್ಷಿಕ ಉಪನ್ಯಾಸಗಳಿಗೆ ಆಮಂತ್ರಿಸಿ, ಕೊನಗೆ ಅದು ಸಾಧ್ಯವಾಗದೆ ಪ್ರಕಟಣೆಗೆ ಬೇರಾವ ಅನುಕೂಲತೆಗಳು ಒದಗದ ಸಂದರ್ಭದಲ್ಲಿ ಅದಕ್ಕೂ ಏರ್ಪಾಡು ಮಾಡಿದ ಡಾ. ಎಸ್. ಪಿ. ಪಾಟೀಲ ರನ್ನು ನೆನೆಯುತ್ತೇನೆ. ಅದರಂತೆ ಪ್ರಕಟಣೆಯ ವಿಷಯದಲ್ಲಿ ಆಸಕ್ತಿವಹಿಸಿದ ಡಾ. ಉಪಾಧ್ಯೆಯವರ ಜನ್ಮಸ್ಥಳವಾದ ಸದಲಗಾದ ಸಮಸ್ತ ಶ್ರಾವಕ ಮಂಡಳಿ; ಶ್ರೀ ಶಾಂತಪಣ್ಣ ಮಿರ್ಜಿ, ಶ್ರೀ ಜೆ. ಪಿ. ಜವಳಿ, ಶ್ರೀ ಜಿನದತ್ತ ದೇಸಾಯಿ ಹಾಗೂ ಶ್ರೀ ಪಾರ್ಶ್ವನಾಥ ಕೆಂಪಣ್ಣವರ ಅವರಿಗೆ ವಂದನೆಗಳು.

ಅಚ್ಚಿನ ಕಾರ್ಯವನ್ನು ಶ್ರದ್ದೆಯಿಂದ ನಿರ್ವಹಿಸಿದ ಮಯೂರ ಪ್ರಿಂಟರ್ಸನ ಶ್ರೀ ವಿನೋದ ಪಾಟೀಲ ಹಾಗೂ ಅವರ ಸಿಬ್ಬಂದಿಯವರಿಗೆ ಶುಭಾಶಗಳು.

‘ಆರಾಧನಾ’ ಕೋಳೇಕರ ಗಲ್ಲಿ ಡಾ. ಬಿ. ಕೆ. ಖಡಬಡಿ

ಸಂಕೇಶ್ವರ (ಬೆಳಗಾವ ಜಿಲ್ಲೆ)

## ಪ್ರಕಾಶಕರ ಮಾತು

ಜೈನ ಸಾಹಿತ್ಯ ಸಂಶೋಧನ ಕ್ಷೇತ್ರಕ್ಕೆ ಡಾ. ಆ. ನೇ. ಉಪಾಧ್ಯೆ ಅವರಿಂದ ಸಂದ ಕಾಣಿಕೆ ಅಪೂರ್ವವಾದುದು. ತಮ್ಮ ಜೀವನದುದ್ದಕ್ಕೂ ತಪಸ್ಸಿನಂತೆ ಶ್ರದ್ಧಾಪೂರ್ವಕವಾಗಿ ದುಡಿದ ಅವರ ಸರಳ–

ಸಾತ್ವಿಕ–ಧೀಮಂತ ವ್ಯಕ್ತಿತ್ವ ಹಾಗೂ ಅವರ ಸಾಧನೆಯ ವೈಶಿಷ್ಟ್ಯವನ್ನು ಅವರನ್ನು ತೀರ ಹತ್ತಿರ ದಿಂದ ಬಲ್ಲ ಡಾ. ಬಿ. ಕೆ. ಖಡಬಡಿ ಅವರು ಇಲ್ಲಿ ಶ್ರದ್ಧಾ– ಭಕ್ತಿಪೂರ್ವಕವಾಗಿ ನಿರೂಪಿಸಿದ್ದಾರೆ. ಇಂಥ ಉಪಯುಕ್ತ ಕೃತಿಯನ್ನು ಪ್ರಕಟಿಸಲು ಅನುಮತಿ ಇತ್ತ ಡಾ. ಬಿ. ಕೆ. ಖಡಬಡಿ ಅವರಿಗೆ ಕೃತಜ್ಞತೆಗಳು.

ಈ ಗ್ರಂಥಪ್ರಕಾಶನಕ್ಕೆ ನೆರವಾದ ಡಾ. ಆ. ನೇ. ಉಪಧ್ಯೆ ಅವರ ಜನ್ಮಸ್ಥಳವಾದ ಸದಗಲಗಾದ ಸಮಸ್ತ ಶ್ರಾವಕ ಮಂಡಳಿ, ಸಮಾಜ ಭೂಷಣ ಶ್ರೀ ಶಾಂತಪಣ್ಣ ಮಿರ್ಜಿ ಹಾಗೂ ಶ್ರೀ ಪಾರ್ಶ್ವನಾಥ ಕೆಂಪಣ್ಣವರ ಅವರನ್ನು ನೆನೆಯಲು ಹೆಮ್ಮೆ. ವೈಶಾಲಿ ಪ್ರಕಾಶನ ಇವರಿಗೆಲ್ಲ ಋಣಿಯಾಗಿದೆ.

ಪ್ರಕಾಶಕರು

## ಅಧ್ಯಾಯ : ಒಂದು

## ಡಾ. ಆ. ನೇ. ಉಪಾಧ್ಯೆ ವ್ಯಕ್ತಿತ್ವ

೧. ಅವರ ಜೀವನದ ಮಹತ್ವದ ಘಟ್ಟಗಳು

೨. ಅವರ ಜೀವನದ ಹಲವು ಇಣುಕು ನೋಟಗಳು.

## ಡಾ. ಆ. ನೇ. ಉಪಾಧ್ಯೆ ವ್ಯಕ್ತಿತ್ವ

### ೧. ಅವರ ಜೀವನದ ಮಹತ್ವದ ಘಟ್ಟಗಳು

ಡಾ. ಆ. ನೇ ಉಪಾಧ್ಯೆಯವರು ಜೈನವಿದ್ಯೆ, ಪ್ರಾಚ್ಯವಿದ್ಯೆ, ಪ್ರಾಕೃತ ಭಾಷೆ ಮತ್ತು ಸಾಹಿತ್ಯ ಕ್ಷೇತ್ರಗಳಲ್ಲಿಯ 20 ನೆಯ ಶತಮಾನದ ಮಹಾನ್ ವಿದ್ವಾಂಸರು, ಪ್ರಾಧ್ಯಾಪಕರು. ಸಂಶೋಧಕರು ; ಕನ್ನಡ ನಾಡಿನ ಸೌಜನ್ಯ ಶೀಲ ಪುತ್ರರು. ಹೆಚ್ಚಾಗಿ ಮಹಾರಾಷ್ಟ್ರದಲ್ಲಿ ಅಂದರೆ ಕೊಲ್ಲಾಪುರದ ರಾಜಾರಾಮ ಮಹಾವಿದ್ಯಾಲಯದಲ್ಲಿ ಅತ್ಯಂತ ಆತ್ಮೀಯತೆ ಮತ್ತು ನಿಷ್ಠೆಯಿಂದ ತಮ್ಮನ್ನು ಈ ಕ್ಷೇತ್ರಗಳಿಗೆ ಅರ್ಪಿಸಿಕೊಂಡು, ಅವುಗಳಲ್ಲಿ ಆತುಲನೀಯ ಸಾಧನೆಗೈದ ಮೇಧಾವಿಗಳು. ಇಂದಿನ ಪೀಳಿಗೆಯ ವಿದ್ಯಾರ್ಥಿಗಳಿಗೂ, ಜಿಜ್ಞಾಸುಗಳಿಗೂ ಮತ್ತು ಅನೇಕ ವಿದ್ವಾಂಸರಿಗೂ ಕೂಡ ಅವರ ಸಾಧನೆಯ ವರ್ಣಮಯ ಕೊಡುಗೆಯ ಸರಿಯಾದ ಅಂದಾಜು ಸಿಗದಷ್ಟು ಆಳವಾಗಿ ಹುದುಗಿ ಕೊಂಡಿವೆ ಅವರ ಕಾರ್ಯದ ಹಲವು ಮುಖಗಳು. ತಮ್ಮ

ತುಂಬು ಜೀವನದುದ್ದಕ್ಕೂ ಅವರು ವ್ಯಕ್ತಮಾಡಿದ ಆದರ್ಶ ವಿಚಾರಗಳಲ್ಲಿ, ಬಿಟ್ಟುಹೋದ ಸಂದೇಶಗಳಲ್ಲಿ, ಮಾರ್ಗದರ್ಶಕ ಉಪದೇಶಗಳಲ್ಲಿ, ಕೆಲವನ್ನಾದರೂ ಆ ಆಳದಿಂದ ಹೊರದೆಗೆದು ಇಂದಿನ ಸಹೃದಯರ ಮುಂದಿಟ್ಟು, ಅವರ ಬಗ್ಗೆ ಇದ್ದ ನನ್ನ ಗೌರವವನ್ನು ಎಲ್ಲರೊಡನೆ ಹಂಚಿಕೊಳ್ಳುವುದೇ ಈ ಉಪನ್ಯಾಸಗಳ ಪ್ರಮುಖ ಉದ್ದೇಶವೆಂದು ನಾನು ಭಾವಿಸಿರುವೆನು.

ಆರಂಭದಲ್ಲಿ ಡಾ. ಉಪಾಧ್ಯೆಯವರ ಜೀವನದ ಮಹತ್ವದ ಘಟ್ಟಗಳನ್ನು ನೆನಪಿಗೆ ತಂದುಕೊಳ್ಳುವಾ :

**1.** ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲೂಕಿನ ಸದಲಗಾ ಗ್ರಾಮದ ಉಪಾಧ್ಯಾಯರ ಕುಟುಂಬದಲ್ಲಿ ದಿ. **6-2-1906** ರಂದು ಅವರ ಜನ್ಮವಾಯಿತು. ತಂದೆ-ತಾಯಿಗಳ ಮಾರ್ಗದರ್ಶನದಲ್ಲಿ ಅಲ್ಲೇ ಅವರ ಪ್ರಾಥಮಿಕ ಶಿಕ್ಷಣ ಕನ್ನಡದಲ್ಲಿಯೇ ಆಯಿತು.

**2.** ಮಾಧ್ಯಮಿಕ ಶಿಕ್ಷಣವನ್ನು ಬೆಳಗಾವಿಯ ಗಿಲಗಿಂಜಿ ಅರ್ಟಾಲ ಹಾಯಸ್ಕೂಲನಲ್ಲಿ ಮುಗಿಸಿದ್ದಾಯಿತು. ಮುಂದೆ ಅವರು ಕಾಲೇಜ ಶಿಕ್ಷಣವನ್ನು ಕೊಲ್ಲಾಪುರದ ರಾಜಾರಾಮ ಮತ್ತು ಸಾಂಗಲಿಯ ವಿಲಿಂಗ್ಡನ್ ಕಾಲೇಜಗಳಲ್ಲಿ ಅತ್ಯಂತ ಪರಿಶ್ರಮದಿಂದ ಸಾಗಿಸಿ, **1928** ರಲ್ಲಿ ಮುಂಬಯಿ ವಿಶ್ವವಿದ್ಯಾಲಯದಿಂದ ಸಂಸ್ಕೃತ-ಪ್ರಾಕೃತಗಳಲ್ಲಿ ಬಿ .ಎ (ಆನರ್ಸ) ಪದವಿಯನ್ನು ಪಡೆದರು. ಈ ಎರಡೂ ಕಾಲೇಜುಗಳಲ್ಲಿ ಸ್ನಾತಕೋತ್ತರ ಅಧ್ಯಯನದ ಏರ್ಪಾಟು ಇಲ್ಲವಾದ ಕಾರಣ, ಪುಣೆಗೆ ಹೋಗಿ ಅಲ್ಲಿಯ ಭಂಡಾರಕರ ಓರಿಯಂಟಲ್ ಸಂಶೋಧನ ಸಂಸ್ಥೆಯ ಸಂಬಂಧಿತ ವರ್ಗಗಳಲ್ಲಿ ಸೇರಿ, ಗಾಢ ವ್ಯಾಸಂಗಮಾಡಿ **1930** ರಲ್ಲಿ ಪ್ರಾಕೃತ-ಸಂಸ್ಕೃತ ವಿಷಯಗಳಲ್ಲಿ ಎಂ. ಎ. ಪದವಿಯನ್ನು ಮೊದಲನೆಯ ವರ್ಗದೊಂದಿಗೆ ಪಡೆದರು.

ಅದೇ ವರುಷ ರಾಜಾರಾಮ ಕಾಲೇಜಿನಲ್ಲಿ ಪ್ರಾಕೃತ ಅರ್ಧಮಾಗಧಿ ವಿಷಯದ ಪ್ರಾಧ್ಯಾಪಕರಾಗಿ ನಿಯಮಕಗೊಂಡರು. ಸುಂದರವಾದ ಕೊಲ್ಲಾಪುರ ಪಟ್ಟಣದ ನಿವಾಸಿಗಳಾದರು. ಅಲ್ಲದೆ **1930** ರಿಂದ **1962** ರ ವರೆಗಿನ ದೀರ್ಘ ಅವಧಿಯಲ್ಲಿ ರಾಜಾರಾಮ ಕಾಲೇಜಿನಲ್ಲೆ ಪ್ರಾಧ್ಯಾಪಕರಾಗಿ ಉಳಿದು, ತಮ್ಮ ಅಮೂಲ್ಯ ಸೇವೆ ಸಲ್ಲಿಸಿದರು ಮತ್ತು ಗ್ರಂಥಸಂಪಾದನೆ, ಸಂಶೋಧನೆ ಇತ್ಯಾದಿ ಕ್ಷೇತ್ರಗಳಲ್ಲಿ ಉಪಯುಕ್ತ ಬಹುಮುಖ ಸಾಧನೆಗೈದರು.

**3. 1939** ರಲ್ಲಿ ಮುಂಬಯಿ ವಿಶ್ವವಿದ್ಯಾಲಯದಿಂದ ಆಗಿನ ಕಾಲದಲ್ಲಿ ಅತ್ಯಂತ ಪ್ರತಿಷ್ಠಿತವಾದ ಡಿ. ಲಿಟ್. ಪದವಿಯನ್ನು ಪಡೆದರು.

**4. 1939** ರಿಂದ **1942** ರ ವರೆಗೆ ಮುಂಬಯಿ ವಿಶ್ವವಿದ್ಯಾಲಯದ ಸ್ಪ್ರಿಂಗರ ರಿಸರ್ಚ ಸ್ಕಾಲರ ಆಗಿ, ಉಚ್ಚ ಸಂಶೋಧನೆಗೆ ತಮ್ಮನ್ನು ಅರ್ಪಿಸಿಕೊಂಡರು.

**5. 32** ವರುಷಗಳ ಸುದೀರ್ಘ ಮತ್ತು ಅಖಂಡ ಸೇವೆಯ ನಂತರ **1962** ರಲ್ಲಿ ರಾಜಾರಾಮ ಕಾಲೇಜಿನಿಂದ ನಿವೃತ್ತರಾದರು.

**6. 1962** ರಿಂದ **1971** ರ ವರೆಗೆ ಕೊಲ್ಲಾಪುರದ ಶಿವಾಜಿ ವಿಶ್ವ ವಿದ್ಯಾಲಯದಲ್ಲಿ ಯು.ಜಿ.ಸಿ. (ಅನುದಾನದೊಂದಿಗೆ) ಎಮೆರಿಟಸ್ ಪ್ರೊಫೆಸರರಾಗಿ ಕೆಲಸ ಮಾಡಿದರು. ಅಲ್ಲದೆ, ಅದೇ ಅವಧಿಯಲ್ಲಿ ಆ ವಿಶ್ವವಿದ್ಯಾಲಯದ ಕಲಾ ವಿಭಾಗದ ಡೀನರಾಗಿ ಬಹುಮುಖ ಸೇವೆ ಸಲ್ಲಿಸಿದರು ಮತ್ತು ಆಗಿನ ಉಪಕುಲಪತಿ ಡಾ. ಎ. ಜಿ. ಪವಾರರ ನಚ್ಚಿನ ಸಹಕಾರಿಗಳಾಗಿಯೂ, ಆತ್ಮೀಯ ಸಲಹೆಗಾರರಾಗಿಯೂ, ಹೊಸ ವಿಶ್ವವಿದ್ಯಾಲಯಕ್ಕೆ ಗಟ್ಟಿಯಾದ ತಳಹದಿ ಯನ್ನೊದಗಿಸಲು ದುಡಿದರು.

**7. 1971** ರಲ್ಲಿ ಮೈಸೂರು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸಲ್ಪಟ್ಟ ಜೈನಪೀಠದ ಸಂಸ್ಥಾಪಕ ಪ್ರಾಧ್ಯಾಪಕರಾಗಿ, ಮುಖ್ಯಸ್ಥರಾಗಿ ನಿಯಮಕ ಗೊಂಡು, **1975** ರ ವರೆಗೆ ಈ ಪೀಠಕ್ಕೆ ಭದ್ರವಾದ ಬುನಾದಿ ಹಾಕಿ, ಅದನ್ನು ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನಗಳ ಸ್ವತಂತ್ರ ಮತ್ತು ಪೂರ್ಣ ದರ್ಜೆಯ ಸ್ನಾತಕ್ಕೋತ್ತರ ವಿಭಾಗವನ್ನಾಗಿ ಪರಿವರ್ತಿಸಿದರು.

**8. 1975** ರಲ್ಲಿ ಅಲ್ಲಿಂದ ನಿವೃತ್ತರಾಗಿ ಕೊಲ್ಲಾಪುರದಲ್ಲಿದ್ದ ತಮ್ಮ ಮನೆಗೆ ಹೋಗಿ, ಕೆಲವೇ ದಿನಗಳಲ್ಲಿ ಅಂದರೆ **8-10-1975** ರಲ್ಲಿ ಒಮ್ಮೆಲೆ ಬಂದ ಹೃದಯಾಘಾತದಿಂದ ಕೊನೆಯ ಉಸಿರೆಳೆದರು.

ಈ ಎಂಟು ಪ್ರಮುಖ ಘಟ್ಟಗಳಲ್ಲಿ ಪ್ರತಿಬಿಂಬಿತವಾದಂತೆ, **1930** ರಿಂದ **1975** ರ ವರೆಗಿನ ದೀರ್ಘ ಕಾಲಮಾನದಲ್ಲಿ ಡಾ. ಉಪಾಧ್ಯೆಯವರು ಪ್ರಖ್ಯಾತ ಪ್ರಾಧ್ಯಾಪಕರಾಗಿ, ಗ್ರಂಥಗಳ ಸಂಪಾದಕರಾಗಿ, ಸಂಶೋಧಕರಾಗಿ, ಜೈನಪೀಠದ ಸಂಸ್ಥಾಪಕರಾಗಿ ಅಮೋಘಕಾರ್ಯ ಮಾಡಿದ್ದಾರೆ; ಬಹುಮೂಲ್ಯ, ಸಾಧನೆ ಗೈದಿದ್ದಾರೆ. ಈ ಸಾಧನೆಯ ಗಾತ್ರ-ಗುಣಗಳನ್ನಳೆಯಲು ಹಲವಾರು ಅಳತೆಗೋಲುಗಳು ಅವಶ್ಯಕ. ಅವೆಲ್ಲವನ್ನು ಬದಗಿರಿಸಿ ನಾನು ಒಂದೆರಡನ್ನು ಮಾತ್ರ ಇಲ್ಲಿ ಉಲ್ಲೇಖಿಸುವದು ಉಚಿತ :

'ಡೆಕ್ಕನ್ ಹೆರಾಲ್ಡ್' ದಿನಪತ್ರಿಯಲ್ಲಿ **1-2-1971** ರಂದು ಪ್ರಕಟವಾದ (ಅದರ ಮೈಸೂರು ಪ್ರತಿನಿಧಿಯಿಂದ ಕಳಿಸಲ್ಪಟ್ಟ) ಸುದ್ದಿಯೊಂದನ್ನು ಇಲ್ಲಿ ಪುನರುಚ್ಚರಿಸಬಹುದಾಗಿದೆ. ಅದು ಡಾ. ಉಪಾಧ್ಯೆಯವರು ಮೈಸೂರು ವಿಶ್ವವಿದ್ಯಾಯದ ಹೊಸ ಪೀಠವನ್ನು ಅಲಂಕರಿಸಿದ ಸಂದರ್ಭ :

**"Vice-Chaneellor shri K.L. Shrimali and Prof. D. javare Gouda deserve to be cogratulated on persuading India's great Scholar Dr. A. N. Upadhye to decorate the Jaina Chair instituted by the renowned philonthropist donor Shri Shanti Prasad Jain, Delhi. The Academic circles here rightly feel that with the appointment of the 66-year old Dr. Upadhye, the University of Mysore has become richer today'.**

ಮೈಸೂರು ವಿಶ್ವವಿದ್ಯಾಲಯದಲ್ಲಿ ದಿಲ್ಲಿಯ ಪ್ರಸಿದ್ದ ಶಿಕ್ಷಣ ಪ್ರೇಮಿ ದಾನಶೀಲರಾದ ಶ್ರೀ ಶಾಂತಿಪ್ರಸಾದ ಜೈನರ ದತ್ತಿಯಿಂದ ಹೊಸದಾಗಿ ಸಂಸ್ಥಾಪಿಸಲ್ಪಟ್ಟ ಜೈನಪೀಠವನ್ನಲಂಕರಿಸಲು, ಭಾರತದ ಮಹಾನ್ ವಿದ್ವಾಂಸ ಡಾ. ಆ. ನೇ. ಉಪಾಧ್ಯೆಯರವನ್ನು ಒಪ್ಪಿಸಿದ ಕುಲಪತಿ ಶ್ರೀ ಕೆ. ಎಲ್. ಶ್ರೀಮಾಳಿ ಮತ್ತು ಪ್ರಾಧ್ಯಾಪಕ ಡಿ. ಜವರೇಗೌಡರು ಅಭಿನಂದನೆಗೆ ಪಾತ್ರರಾಗಿದ್ದರೆ. (ಅಲ್ಲದೆ) ಇಲ್ಲಿಯ ವಿದ್ಯಪ್ರೇಮಿಗಳ, ಪ್ರಾಧ್ಯಪಕರ ವಲಯಗಳಲ್ಲಿ **66** ವರ್ಷ ವಯಸ್ಸಿನ ಡಾ. ಉಪಾಧ್ಯೆಯವರ ಈ ನಿಯಮಣೂಕಿಯಿಂದ ಮೈಸೂರು ವಿಶ್ವವಿದ್ಯಾಲಯವು ಇಂದು ಅಧಿಕ ಶ್ರೀಮಂತವಾಗಿದೆ ಎಂಬ ಅನಿಸಿಕೆ ಸರಿಯಾಗಿ ಮೂಡಿಬಂದಿದೆ.

ಎಲ್ಲರಿಗೂ ಈ ಸುದ್ದಿಯ ಅರ್ಥ ಸರಿಯಾಗಿ ಆಗಬೇಕಾದರೆ, ನಾನು ಇದಕ್ಕೆ ಸಂಬಂಧಿಸಿದ ಇನ್ನೊಂದು ವಿಷಯವನ್ನು ಭಾರತೀಯ ಜ್ಞಾನಪೀಠದ ನಿರ್ದೇಶಕರಾಗಿದ್ದ ಶ್ರೀ ಲಕ್ಷ್ಮೀಚಂದ ಜೈನರಿಂದ ನನಗೆ ತಿಳಿದುಬಂದಂತೆ–ಇಲ್ಲಿ ಪ್ರಸ್ತಾಪಿಸುವುದು ಅವಶ್ಯಕ. ಆ ವಿಷಯ ಹೀಗಿದೆ : ಭಾರತೀಯ ಜ್ಞಾನಪೀಠದ ಅಧ್ಯಕ್ಷರಾಗಿದ್ದ ಶ್ರೀ ಶಾಂತಿಪ್ರಸಾದ ಜೈನರು ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿಗಳಿಗೆ ತಿಳಿಸಿದರಂತೆ : ಡಾ. ಉಪಾಧ್ಯೆ ಅವರು ಕೊಲ್ಲಾಪುರ ಬಿಟ್ಟು ಮೈಸೂರಿಗೆ ಬರವುದಾದರೆ, ಜೈನ ಪೀಠದ ಸಂಸ್ಥಾಪನೆಗಾಗಿ ಮೂರು ಲಕ್ಷ ರೂಪಾಯಿಗಳನ್ನು ನೀಡಲಾಗುವದು. ಆಗ ಡಾ. ಕೆ. ಎಲ್. ಶ್ರೀ ಮಾಳಿಯವರು, ಪ್ರಾ. ಜವರೇಗೌಡರು. ಡಾ. ಉಪಾಧ್ಯೆಯವರನ್ನು ಈ ಹೊಣೆ ಹೊರಲು ಒಪ್ಪಿಸಿದರು. ಈ ಮೊದಲು ಉಪಾಧ್ಯೆಯವರು ಕೊಲ್ಲಾಪುರದಲ್ಲೇ ತಮ್ಮ ಜೀವನವನ್ನು ಮುಂದುವರಿಸಬಯಸಿದ್ದರು.

ಈ ಉಲ್ಲೇಖಕ್ಕೆ ಅನುಬಂಧವಾಗಿ ಇನ್ನೊಂದು ಸಂಗತಿಯನ್ನು ಇಲ್ಲಿ ವಿವರಿಸುವದು ನನಗೆ ಅನಿವಾರ್ಯ ಎಸಿಸುತ್ತದೆ; ಈ ಪೂರ್ವದಲ್ಲಿ, ಅಂದರೆ ಡಾ. ಡಿ. ಸಿ. ಪಾವಟೆಯವರು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸಂಸ್ಕೃತ ಪ್ರಾಕೃತ ಪ್ರಾಧ್ಯಾಪಕ ಹುದ್ದೆಯೊಂದನ್ನು ಕಲ್ಪಿಸಿ, ಡಾ. ಉಪಾಧ್ಯೆಯವರು ಅದನ್ನು ವಹಿಸಿಕೊಳ್ಳಬೇಕೆಂದು ಡಾ. ಪಾವಟೆಯವರ ಗುರುಗಳೂ ಡಾ. ಉಪಾಧ್ಯೆಯವರ ಮಿತ್ರರೂ ಆದ ಪ್ರೊ. ಬಿ. ಬಿ. ಬಾಗಿಯವರ ಮುಖಾಂತರ ಬಯಸಿದ್ದರೆಂದೂ, ಆದರೆ ಡಾ, ಉಪಾಧ್ಯೆಯವರು ಮುಪ್ಪಿನಿಂದ ಹಣ್ಣಾದ ತಮ್ಮ ತಾಯಿಯವರನ್ನು ಕೊಲ್ಲಾಪುರದಲ್ಲಿ ಬಿಟ್ಟು ಧಾರವಾಡಕ್ಕೆ ಬರುವುದು ಸಾಧ್ಯವಾಗದೆಂದು ವಿನಯಪೂರ್ವಕವಾಗಿ ಸ್ಪಷ್ಟವಾಗಿಯೇ ಪ್ರೊ. ಬಾಗಿಯವರಿಗೆ ತಿಳಿಸಿದರೆಂಬ ಸುದ್ದಿ ಕರ್ನಾಟಕ ವಿಶ್ವವಿದ್ಯಾಲಯದ ಆಗಿನ ಪ್ರಾಧ್ಯಾಪಕವಲಯಗಳಲ್ಲಿ ಹರಡಿತ್ತು. ಈ ಸುದ್ದಿ ನಿಜವೆಂದೂ ಕೊಲ್ಲಾಪುರದ ನನ್ನ ಕೆಲ ಮಿತ್ರರಿಂದಲೂ ತರುವಾಯ ನನಗೆ ಖಚಿತವಾಗಿ ತಿಳಿದುಬಂದಿತು.

೨. ಅವರ ವೈಯಕ್ತಿಕ ಜೀವನದ ಹಲವು ಇಣುಕು ನೋಟಗಳು :

**1947** ರಲ್ಲಿ ನಾನು ರಾಜಾರಾಮ ಕಾಲೇಜ ಸೇರಿದಾಗ, ಡಾ. ಉಪಾಧ್ಯೆಯವರು ಜೈನ ವಿದ್ಯಾರ್ಥಿ ವಸತಿಗೃಹದ (ಜೈನ ಬೋರ್ಡಿಂಗ್‌ನ) ಆವರಣದಲ್ಲಿದ್ದ ಮೇಲ್ವಿಚಾರಕ (ಸುಪರಿಂಟೆಂಡಂಟ್) ಪ್ರಶಸ್ತ ನಿವಾಸದಲ್ಲಿ ವಾಸ ಮಾಡುತ್ತಿದ್ದರು. ಅನೇಕ ವರುಷಗಳವರೆಗೆ ಅಲ್ಲಿಯೇ ಇದ್ದು ಆ ಸಂಸ್ಥೆಯ ಮೇಲ್ವಿಚಾರಣೆ ಮಾಡುತ್ತಿದ್ದರು, ಅವರ ಗ್ರಂಥಾಲಯ ಆ ನಿವಾಸದ ಮೇಲಿನ ವಿಶಾಲ ಅಟ್ಟದ ಒಂದು ಭಾಗವಾಗಿತ್ತು; ಅವರ ಅಧ್ಯಯನ-ಸಂಶೋಧನ ವ್ಯಾಸಂಗದ ಕೋಣೆ ಅದರ ಒಂದು ಭಾಗವಾಗಿತ್ತು. ಅದರಲ್ಲಿ ಕಪ್ಪು ಬಣ್ಣದ ಬ್ರಿಟಿಶ್ ಮಾದರಿಯ ಒಂದು ದೊಡ್ಡ ಮೇಜು, ಹಲವಾರು ಗ್ರಂಥ-ಫಾಯಿಲುಗಳೋಂದಿಗೆ ಎದ್ದು ಕಾಣುತ್ತಿತ್ತು. ಅದರ ಎಡಬದಿಗೆ ಒಂದು ಚಿಕ್ಕ ಟೇಬಲ್ಲಿನ ಮೇಲೆ ಟಾಯಿಪ-ರಾಯಿಟರ್, ಬಲಬದಿಗೆ ಒಂದು ಆರಾಮ ಖುರ್ಚಿ ಇರುತ್ತಿತ್ತು.

ಅವರನ್ನು ಕಾಣಲು ಬಂದ ಯಾರಿಗಾದರೂ ಮೇಲೆ ಹೋಗಲು ಅವರ ಪರಿವಾರದ ಸದಸ್ಯರೊಬ್ಬರಿಂದ ಸೂಚಿಸಲಾಗುತ್ತಿತ್ತು. ಅಲ್ಲಿ ಹೋದೊಡನೆ ನಮಗೆ ಕಂಡುಬರುವದು ಶುಭ್ರ ಪಂಚೆ, ಸಡಿಲಾದ ತೋಳಿನ (ತುಸು ಮೇಲಕ್ಕೇರಿಸಿ ಹೊಲಿದ) ಬಿಳೇ ಶರ್ಟು, ಅರ್ಧಮರ್ಧ ಬಕ್ಕಾದ ತಲೆ, ಕಪ್ಪು ಕಟ್ಟಿನ ಕನ್ನಡಕದ ಸ್ಥೂಲ ದೇಹದ ಸಭ್ಯ ವ್ಯಕ್ತಿ, ಓದುವುದರಲ್ಲೊ, ಬರೆಯುವದರಲ್ಲೋ ತಲ್ಲೀನವಾಗಿರುತ್ತಿದ್ದುದು. ಕಾಣಲು ಬಂದ

ವ್ಯಕ್ತಿಗೆ ನಗುಮುಖ ದೊಂದಿಗೆ, ಸವಿನುಡಿಯಲ್ಲಿ ಸ್ವಾಗತ ಮಾಡಿ, ಅವರೊಡನೆ ಮೆಲುದನಿಯಲ್ಲಿ ಮಾತನಾಡಿ ಕಳಿಸುತ್ತಿದ್ದರು. ಈ ಕ್ರಮ ಅವರು ಮುಂದೆ ರಾಜಾರಾಮಪುರಿಯ ಶಾಹು ಬಟ್ಟೆಯ ಗಿರಣಿಯ ಸಮೀಪಕ್ಕಿದ್ದ ಲಿಂಗ್ರಸ ಕಟ್ಟಡದಲ್ಲಿಯ ತಮ್ಮ ಬಾಡಿಗೆಯ ಪ್ರಶಾಂತ ನಿವಾಸದಲ್ಲಿಯೂ, ತರವಾಯ ನಿವೃತ್ತಿಪೂರ್ವದ ಸುಮಾರಿಗೆ ಕಟ್ಟಿಸಲಾದ "ಧವಲಾ" ಎಂಬ ಹೆಸರಿನ ತಮ್ಮ ಸ್ವಂತ ನಿವಾಸದಲ್ಲಿಯೂ ಸಾಗುತ್ತಿತ್ತು.

ಸಂಜೆ ಸೂರ್ಯಾಸ್ತದ ಪೂರ್ವದಲ್ಲಿಯೇ ಊಟ ಮುಗಿಸಿಕೊಂಡು ಡಾ. ಉಪಾಧ್ಯೆಯವರು ಹೊರಗೆ ಹೊರಟಾದ ಅವರ ವೇಷಭೂಷಣ ವೈಶಿಷ್ಟ್ಯ ಪೂರ್ಣವಾಗಿರುತ್ತಿತ್ತು. ಬಿಳೀ ಪಂಜೆ, ಶರ್ಟು, ಕೊರಳು ಮುಚ್ಚುವ ಉದ್ದವಾದ ಕೋಟು, ತಲೆಯ ಮೇಲೆ ಕರೇ ಟೊಪ್ಪಿಗೆ, ಕೈಯಲ್ಲಿ ಕೋಲು, ಜೈನ ಬೋರ್ಡಿಂಗನಲ್ಲಿಯ ತಮ್ಮ ನಿವಾಸದಿಂದ ಹೊರಟು ಸುತ್ತಲೂ ತುಸು ಅಡ್ಡಾಡಿ, ಕಂಡ ವಿದ್ಯಾರ್ಥಿಗಳೊಡನೆ ನಗೆಮುಖದಿಂದ ಮಾತನಾಡಿ, ನೇರವಾಗಿ ಶಾಹುಪುರಿಯ ಜಿನಮಂದಿರಕ್ಕೆ ಸಾಗುತ್ತಿದ್ದರು. ಅಲ್ಲಿ ಪ್ರಾರ್ಥನೆ, ವಂದನೆ ಸಲ್ಲಿಸಿ, ಪರಿಚಿತರನ್ನು ಮಾತನಾಡಿಸಿ, ಸಮೀಪದಲ್ಲಿಯೇ ಇದ್ದ ಅವರ ಮಿತ್ರರಾದ ಶ್ರೀ ಶಾಂತಿನಾಥ ಪಾಟನೆಯವರ ಅಂಗಡಿಗೆ ಹೋಗಿ, ತುಸು ಹೊತ್ತು ಹರಟೆ ಹೊಡೆದು, ತಮ್ಮ ನಿವಾಸಕ್ಕೆ ಮರಳಿ ತಮ್ಮ ದೈನಂದಿನ ಅಧ್ಯಯನ ಲೇಖನಗಳಲ್ಲಿ ಮಗ್ನಾರಾಗುತ್ತಿದ್ದರು.

ಮನೆಯಲ್ಲಿ ವೃದ್ದ ತಾಯಿ, ಅವರಿಗೆ ತಕ್ಕಂತಿದ್ದ ಸೌಜನ್ಯಶೀಲ ಪತ್ನಿ, ಮೂವರು ಗಂಡುಮಕ್ಕಳು, ಒಬ್ಬ ಹೆಣ್ಣುಮಗಳು–ಹೀಗೆ ಮಧ್ಯಮ ಗಾತ್ರದ ಪರಿವಾರದೊಂದಿಗೆ, ಆವರವರಿಗೆ ತಕ್ಕಂತೆ ಅದರ, ಪ್ರೀತಿ, ವಾತ್ಸಲ್ಯಗಳೊಡನೆ ಹಾಯಾಗಿ ಇರುತ್ತಿದ್ದರು. ಮಕ್ಕಳೆಲ್ಲ ಮರಾಠಿ ಮಾಧ್ಯಮದಲ್ಲಿ ಕಲಿತದ್ದರಿಂದ ಮನೆಯಲ್ಲಿ ಮರಾಠಿ ಕನ್ನಡ ಎರಡೂ ಭಾಷೆಗಳನ್ನಾಡುತ್ತಿದ್ದರು. ಅವರನ್ನು ಕಾಣಬಂದವರೊಡನೆ ಅವರವರ ಭಾಷೆಯಲ್ಲಿ ಮಾತನಾಡುವ ಪರಿಪಾಠ ಇಟ್ಟುಕೊಂಡಿದ್ದರು. ನಾನು ಜೈನ ಬೋರ್ಡಿಂಗಿನ ಸಮೀಪದಲ್ಲಿದ್ದ ಚಿತ್ರದುರ್ಗ ಬೋರ್ಡಿಂಗ್ (ಹಾಸ್ಟೆಲ್) ದಲ್ಲಿದ್ದು ರಾಜಾರಾಮ ಕಲೇಜಿನಲ್ಲಿ ಓದುತ್ತಿದ್ದುದರಿಂದ, ಡಾ. ಉಪಾಧ್ಯೆಯವರ ಪರಿವಾರದ ಎಲ್ಲ ಸದಸ್ಯರ ಪೆರಿಚಯ ಹೊಂದಿದ್ದೆನು. ಮುಂದೆ ಅವರು ರಾಜಾರಾಮಪುರಿಯ ನಿವಾಸಗಳಲ್ಲಿರುವಾಗಲೂ, ನಾನು ಧಾರವಾಡಕ್ಕೆ ಬಂದ ಮೇಲೂ ಕೂಡ, ಪಿಎಚ್. ಡಿ ಮತ್ತು ಇತರ ಸಂಶೋಧನ ಸಮಸ್ಯೆಗಳ ಬಗ್ಗೆ ಆಗುವ ಕಾಣಲು ಅಲ್ಲಿಯೂ ಭೆಟ್ಟಿ ಕೊಡುತ್ತಿದ್ದೆ . ಹೀಗಾಗಿ ಅವರ ಈ ಬಗೆಯ ವೈಯಕ್ತಿಕ ಜೀವನದ ಬಗ್ಗೆ ನಾನು ಚೆನ್ನಾಗಿ ಬಲ್ಲವನಾಗಿದ್ದೆ. ಈಗಲೂ ಇವೆಲ್ಲವುಗಳ ನೆನಪಿದೆ.

ಡಾ. ಉಪಾಧ್ಯೆಯವರ ಮೂರು ವಿಶೇಷ ಗುಣಗಳೆಂದರೆ, ಮಾತೃಭಕ್ತಿ, ಜಿನಭಕ್ತಿ, ಮತ್ತು ಪರಿಶುದ್ಧ, ಸಂತೃಪ್ತ ಮತ್ತು ಕ್ರಮಬದ್ಧ ಬದುಕಿನ ರೀತಿ, ತಾಯಿಯ ಎಲ್ಲ ಬಗೆಯ ಕುಶಲತೆಯ ಕಡೆಗೆ ಲಕ್ಷ್ಯ ಕೊಡುವುದಲ್ಲದೆ, ಪರ ಊರಿಗೆ ಹೊರಟಾಗ ಅವರ ಪಾದ ಮುಟ್ಟಿ, ನಮಸ್ಕರಿಸಿ ಹೊರಡುತ್ತಿದ್ದರು. ದಿನಾಲೂ ಸಂಜೆ ಜಿನಮಂದಿರಕ್ಕೆ ಭೆಟ್ಟಿ. ಜತೆಗೆ ಒಂದೆರಡು ಕಿಲೋಮೀಟರಿನಷ್ಟು ಅಡ್ಡಾಟದಿಂದ. ವಾಯುವಿಹಾರವೂ ಆಗುತ್ತಿತ್ತು. ಹೀಗೆ ದೇಹ-ಮನಸ್ಸು ಎರಡರ ಆರೋಗ್ಯದಿಂದ ಅವರು ಸದೈವ ಸಂತೃಪ್ತರಾಗಿ ತಮ್ಮ ಪರಿಶುದ್ಧ ಜೀವನವನ್ನು ಕ್ರಮಬದ್ಧವಾಗಿ ಇಟ್ಟುಕೊಂಡಿದ್ದರು.

ಡಾ. ಉಪಾಧ್ಯೆಯವರು ಕಾಲೇಜಿನಲ್ಲಿ ಅಪ್ಪಟ ಪ್ರಾಧ್ಯಾಪಕರಾಗಿ ಎದ್ದು ಕಾಣುತ್ತಿದ್ದರು. ಸ್ಥೂಲ ದೇಹ, ಸಾದುಗಪ್ಪುವರ್ಣ, ಅಚ್ಚುಕಟ್ಟಾಗಿ ಧರಿಸಿದ ಸೂಟು-ಬೂಟು-ಟಾಯ್ (ಜಾಕೇಟು ಸಹಿತ), ಬಿಳೇ ಉತ್ತರ ಕರ್ನಾಟಕೀ ಪೇಟಾ, ನಗುಮುಖ- ಹೆಚ್ಚುಕಡಿಮೆ ಅಚ್ಚುಕಟ್ಟಾದ ವೇಷದಲ್ಲಿ ಸಿ. ವ್ಹಿ. ರಾಮನ್ನರನ್ನೇ ಹೋಲುತ್ತಿದ್ದರು. ಆಗ ರಾಜಾರಾಮ ಕಾಲೇಜು ಊರಲ್ಲಿಯ ಹಳೇ ಅರಮನೆಯಲ್ಲಿತ್ತು. ಪ್ರಾ. ಉಪಾಧ್ಯೆಯವರು ಅಟ್ಟದ ಮೇಲಿನ ಸ್ಟಾಫ್‌ರೂಮಿನಲ್ಲಿ ಇದ್ದಾಗ ಉಳಿದ ಪ್ರಾಧ್ಯಾಪಕರು ಅವರನ್ನು ಆದರದಿಂದ ಕಾಣುತ್ತಿದ್ದರು, ಬಿಡುವಿನ ವೇಳೆಯಲ್ಲಿ ವಿಶೇಷವಾಗಿ, ಪ್ರಾ, ಕುಂದಣಗಾರ ರೊಡನೆಯೂ, ಚಹದ ವೇಳೆಯಲ್ಲಿ ಬಂದ ಪ್ರಿನ್ಸಿಪಾಲರೊಡನೆಯೂ ಹರಟೆ ಹೊಡೆಯುತ್ತಿದ್ದರು. ಆಗ ಇನ್ನೊಬ್ಬ ಪ್ರಾಕೃತ ಪಾಧ್ಯಾಪಕರಾದ (ಮೊದಲು ಡಾ. ಉಪಾಧ್ಯೆಯವರ ಶಿಷ್ಯರೇ ಆಗಿದ್ದ) ಡಾ. ಘಾಟಗೆಯವರೂ ಅವರ ಹತ್ತಿರ ಬಂದು ಕುಳಿತು ಮಾತನಾಡುತ್ತಿದ್ದರು, ಚರ್ಚಿಸುತ್ತಿದ್ದರು. ವಿದ್ಯಾರ್ಥಿಗಳಾದರೂ ಸ್ಟಾಫ್ ರೂಮಿನ ಹೊರಗೆ ಬಂದು ನಿಂತು ಅವರನ್ನು ಕಾಣಲು ಬಯಸಿದಾಗ, ಕುಡಲೇ ಎದ್ದುಬಂದು, ಕಾರಿಡಾರಿನಲ್ಲಿ ನಿಂತು ಅವರ ಸಮಸ್ಯೆಗಳಿಗೋ, ಸಂದೇಹಗಳಿಗೋ ಪರಿಹಾರ ಸೂಚಿಸಿ ಸಮಾಧಾನ ಗೊಳಿಸಿ ಕಳಿಸುತ್ತಿದ್ದರು, ತಮ್ಮ ಕ್ಲಾಸುಗಳಿಗೆ ಹೊತ್ತಿಗೆ ಸರಿಯಾಗಿ ಹೋಗಿ, ಅಧ್ಯಾಪನ ಕಾರ್ಯ ಮುಗಿಸಿ, ಗ್ರಂಥಾಲಯಕ್ಕೆ ಬಂದು, ತಮ್ಮ ಚರ್ಮದ ಬ್ಯಾಗಿನಿಂದ ಮನೆಯಿಂದ ತಂದ ಪುಸ್ತಕಗಳನ್ನು ಮರಳಿಸಿ, ಬೇರೆ ಹಲವನ್ನು ಹುಡುಕಿ ತೆಗೆದು ಅದರಲ್ಲಿ ಹಾಕಿ, ಬ್ಯಾಗನ್ನು ತಮ್ಮ ದ್ವಿಚಕ್ರವಾಹನಕ್ಕೆ ತೊಡಗಿಸಿ, ಸಂಜೆ 4-5 ಗಂಟೆಯ ಸುಮಾರಿಗೆ ನಿಧಾನವಾಗಿ ತಮ್ಮ ನಿವಾಸಕ್ಕೆ ತೆರಳುತ್ತಿದ್ದರು. ಇದು ಅವರ ಕಾಲೇಜಿನಲ್ಲಿಯ ಜೀವನದ ಸಾಮಾನ್ಯವಾದ ಬಾಹ್ಯ ಚಿತ್ರ.

ಅಧ್ಯಾಯ : ಎರಡು

ಡಾ. ಉಪಾಧ್ಯೆಯವರ ಸಾಧನೆಯ ಪಕ್ಷಿನೋಟ

೧. ಅಧ್ಯಾಪನ ಕ್ಷೇತ್ರ

೨. ಗ್ರಂಥ ಸಂಪಾದನ, ಸಂಶೋಧನ ಲೇಖನ ಕ್ಷೇತ್ರ

೩. ಪರಿಷತ್ತು–ಸಮ್ಮೇಲನ–ಸಂಗೋಷ್ಠಿಗಳ ಕ್ಷೇತ್ರ

೪. ಸಂಸ್ಥಾಪನ ಕ್ಷೇತ್ರ

## 2. ಡಾ. ಉಪಾಧ್ಯೆಯವರ ಸಾಧನೆಯ ಪಕ್ಷಿನೋಟ

ಡಾ. ಉಪಾಧ್ಯೆಯವರ ಇಡೀ ಜೀವನದ ಮಹತ್ವದ ಘಟ್ಟಗಳನ್ನೂ, ಅವರ ವೈಯಕ್ತಿಕ ಜೀವನದ ಹಲವು ಇಣುಕು ನೋಟಗಳನ್ನೂ ಕಂಡ ತರುವಾಯ, ಅವರು ಗೈದ ಸಾಧನೆಯನ್ನು ಸ್ಥೂಲವಾಗಿ ಕೆಳಗಿನ ಕ್ಷೇತ್ರಗಳಲ್ಲಿದ್ದಂತೆ ನಮ್ಮ ಮನದ ಮುಂದಿಟ್ಟುಕೊಂಡು ಒಂದೊಂದಾಗಿ ವಿವರವಾಗಿ ತಿಳಿದು ಕೊಳ್ಳುವಾ :

1. ಅಧ್ಯಾಪನ ಕ್ಷೇತ್ರ
2. ಸಂಶೋಧ ಲೇಖನ, ಗ್ರಂಥ ಸಂಪಾದನ ಕ್ಷೇತ್ರ
3. ಪರಿಷತ್ತು–ಸಮ್ಮೇಲನ–ಸಂಗೋಷ್ಠಿಗಳ ಕ್ಷೇತ್ರ
4. ಸಂಸ್ಥಾಪನ ಕ್ಷೇತ್ರ

### 1. ಅಧ್ಯಾಪನ ಕ್ಷೇತ್ರ :

ಡಾ. ಉಪಾಧ್ಯೆಯವರು ರಾಜಾರಮ ಕಾಲೇಜಿನಲ್ಲಿಯೇ ಪ್ರಾಕೃತ ಪ್ರಾಧ್ಯಾಪಕರಾಗಿ **32** ವರುಷಗಳ **(1930-1962)** ದೀರ್ಘ ಮತ್ತು ಅಖಂಡ ಸೇವೆ ಸಲ್ಲಿಸಿದರು. ಆಗಿನ ಎಫ್, ವಾಯ್, (ಫರ್ಸ್ಟ್ ಇಯರ್) ದಿಂದ ಎಮ್ ಎ. ವರೆಗೆ (ಇನ್ನೊಬ್ಬ ಪ್ರಧ್ಯಾಪಕರು ಮತ್ತು ಒಬ್ಬ ಟ್ಯೂಟರ ಅವರೊಂದಿಗೆ) ಎಲ್ಲ ತರಗತಿಗಳಲ್ಲಿಯೂ ಕಲಿಸುತ್ತಿದ್ದರು. ಅವರ ವರ್ಗಗಳು ಅಥವಾ ಕ್ಲಾಸುಗಳು ಅತ್ಯಂತ ನಿಯಮಿತ ಮತ್ತು

ಶಿಸ್ತುಬದ್ದವಾಗಿರುತ್ತಿದ್ದವು. ಅವರು ಗಂಟೆ ಬಾರಿಸುವ ತಡವೆ ವರ್ಗದಲ್ಲಿ ಕಾಲಿಡುತ್ತಿದ್ದರು. ಅವರ ಉಪನ್ಯಾಸಗಳು ಸುಸ್ಪಷ್ಟ. ಉದ್ಬೋಧಕ ಮತ್ತು ವಿಷಯದಲ್ಲಿ ಅಭಿರುಚಿ ಹುಟ್ಟಿಸುವಂಥವು. ಆಗ ಎಫ್. ವಾಯ್. ಕೋರ್ಸಿನಲ್ಲಿ ಪ್ರಾಕೃತ, ಸಂಸ್ಕೃತ ಅಥವಾ ಪರ್ಸಿಯನ್ ಭಾಷೆ ಕಡ್ಡಾಯವಾಗಿರುತ್ತಿತ್ತು. ಪ್ರಾಕೃತವನ್ನೇ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಯ್ದುಕೊಳ್ಳುತ್ತಿದ್ದರು. ಸಂಸ್ಕೃತಕ್ಕೆ **100** ವಿದ್ಯಾರ್ಥಿಗಳಿದ್ದರೆ, ಪ್ರಾಕೃತಕ್ಕೆ **150** ವಿದ್ಯಾರ್ಥಿಗಳು ಇರುತ್ತಿದ್ದರು. ಕ್ಲಾಸು ಕಿಕ್ಕಿರಿದು ತುಂಬಿರುತ್ತಿತ್ತು. ಡಾ. ಉಪಾಧ್ಯೆಯವರು ಪಾಠ ಹೇಳುವಾಗ ಅಲ್ಲಿ ಸೂಜಿ ಬಿದ್ದರೂ ಕೇಳಿಸುವಷ್ಟು ಶಾಂತತೆ ಇರುತ್ತಿತ್ತು. ಅವರು ನಡುನಡುವೆ ಸಾಂದರ್ಭಿಕವಾಗಿ ವಿದ್ಯಾರ್ಥಿಗಳಿಗೆ ಪ್ರಶ್ನೆ ಕೇಳುತ್ತಿದ್ದರು. ಈ ಪದ್ದತಿಯಿಂದ ವರ್ಗದಲ್ಲಿ ಅನಿಯಮಿತವಾಗಿರುತ್ತಿದ್ದ ವಿದ್ಯಾರ್ಥಿಗಳಿಗೆ ಎಚ್ಚರಿಕೆ ಕೊಟ್ಟಂತಾಗುತ್ತಿತ್ತು. ವಿದ್ಯರ್ಥಿಗಳು ಎಂಥ ಪ್ರಶ್ನೆ ಕೇಳಿದರೂ ಅಥವಾ ಶಂಕೆ ಎತ್ತಿದರೂ, ಅವನ್ನು ಕೇಳಿಕೊಂಡು ನಿಧಾನವಾಗಿ ತಿಳಿಸಿ ಹೇಳುತ್ತಿದ್ದರು. ಅಂಥವರ ಬಗ್ಗೆ ಅವರಲ್ಲಿ ಸಿಟ್ಟಾಗಲಿ, ಅಪಶಬ್ದವಾಗಲಿ ಎಂದಿಗೂ ಕಂಡುಬರುತ್ತಿರಲಿಲ್ಲ. ಅಂತೆಯೆ ಅವರ ಎಲ್ಲ ಶಿಷ್ಯರಲ್ಲಿ, (ಹಲವು ತುಂಟರಲ್ಲಿ ಕೂಡ) ಅವರ ಬಗ್ಗೆ ಆದರ ಮಿಶ್ರಿತ ಅಂಜಿಕೆ ಇರುತ್ತಿತ್ತು. ವರ್ಗದ ಹೊರಗೆ ಕೂಡ ಅವರ ಎಲ್ಲ ಶಿಷ್ಯರ ವರ್ತನೆ ಹೀಗೇ ಇರುತ್ತಿತ್ತು.

ಸ್ನಾತಕ (ಬಿ. ಎ. ಅನರ್ಸ) ವರ್ಗಗಳಲ್ಲಿ ಪ್ರಾಕೃತ ವಿದ್ಯಾರ್ಥಿಗಳ ಸಂಖ್ಯೆ ಬಹಳ ಕಡಿಮೆ ಇರುತ್ತಿತ್ತು. ಒಮ್ಮೊಮ್ಮೆ ಇಬ್ಬರೋ, ಮೂವರೋ ಅಷ್ಟೇ ವಿದ್ಯಾರ್ಥಿಗಳ ಇರುತ್ತಿದ್ದರು. ಹಾಗಿದ್ದರೂ ಡಾ. ಉಪಾಧ್ಯೆಯವರ ಬೋಧನೆ ಅಷ್ಟೇ ಆತ್ಮೀಯ, ನಿಯಮಿತ ಮತ್ತು ಕ್ರಮಬದ್ದವಾಗಿರುತ್ತಿತ್ತು. ವಾರ್ಷಿಕ ಪರೀಕ್ಷೆಗೆ ಮುಂಚೆಯೆ ಎಲ್ಲ ವಿಷಯಗಳ, ಎಲ್ಲ ಕೋರ್ಸಗಳನ್ನು ಮುಗಿಸಿ, ವಿಮರ್ಶಾತ್ಮಕ ಗ್ರಂಥಗಳ ಆಯಾ ಪ್ರಕರಣಗಳನ್ನು ಸೂಚಿಸಿ, ಓದಿ ಕೊಳ್ಳಲು ಹೇಳುತ್ತಿದ್ದರು. ರಾಜಾರಾಮ ಕಾಲೇಜಿನ ಪ್ರಾಕೃತ ಅರ್ಧಮಾಗಧಿ ವಿಷಯದ ಗ್ರಂಥಾಲಯ ವಿಭಾಗವು ಅತ್ಯಂತ ಸಿರಿವಂತವೂ, ಶಾಸ್ತ್ರೀಯವಾಗಿ ವರ್ಗೀಕೃತವೂ ಆಗಿತ್ತು. ಕೆಲವು ಅಪರೂಪವಾಗಿ ದೊರೆಯುವ ಜೈನಾಗಮ ಗ್ರಂಥಗಳ ಮೇಲಿನ ವಿಮರ್ಶಾತ್ಮಕ ವಸ್ತುವನ್ನು ತಾವೇ ಸಿದ್ದಪಡಿಸಿ ವಿದ್ಯರ್ಥಿಗಳಿಗೆ ಟಿಪ್ಪಣಿ ರೂಪದಲ್ಲಿ ಒದಗಿಸುತ್ತಿದ್ದರು. ಅವುಗಳಲ್ಲಿ ಹಲವು ಇನ್ನೂ ನನ್ನ ಹತ್ತಿರ ಸುರಕ್ಷಿತವಾಗಿವೆ.

ಎಮ್. ಎ. ಹಂತದಲ್ಲಿ ಅಧ್ಯಾಪನ ಅಲ್ಲದೆ ಅವರು ವಿದ್ಯಾರ್ಥಿಗಳಿಗೆ ಅತ್ಯಂತ ಪರಿಶ್ರಮದ ವಿಮರ್ಶಾತ್ಮಕ ಅಧ್ಯಯನದ ತರಬೇತಿ ಕೊಡುತ್ತಿದ್ದರು. ಎರಡು ಮೂರು ವಾರ ಮುಂಚಿತವಾಗಿಯೇ ವಿಷಯ ಸೂಚಿಸಿ, ಅದರ ಮೇಲೆ ಸಂಗೋಷ್ಠಿಯನ್ನೂ ಏರ್ಪಡುಸುತ್ತಿದ್ದರು. ವರುಷದಲ್ಲಿ ಇಂಥ ಸಂಗೋಷ್ಠಿಗಳು ಎರಡಾದರೂ ಆಗಲೇಬೇಕೆಂದು ಹೇಳುತ್ತಿದ್ದರು, ತಾವು ಅವುಗಳಿಗೆ ಪೂರ್ಣಾವಧಿಯ ವರೆಗೆ ಹಾಜರಿದ್ದು, ತಕ್ಕ ತುದ್ದುಪಡಿ ಸೂಚಿಸಿ, ಮಾರ್ಗದರ್ಶನ ಮಾಡುತ್ತಿದ್ದರು. ಪ್ರಾಕೃತ ವಿಷಯದ ಮಹತ್ವ ಮತ್ತು ಅದರಲ್ಲಿಯ ಸಾಹಿತ್ಯದ ಸತ್ವವನ್ನು ಬಿಂಬಿಸುವ ಉದ್ದೇಶದಿಂದ " ಪ್ರಾಕೃತ ಮಂಡಲ" ದ ಸಭೆಗಳಲ್ಲಿ ತಾವೂ ಸಿದ್ದ ಭಾಷಣ ಕೊಡುತ್ತಿದ್ದರು. ಅವರು **“ Ashoka : the Champion of Peace”** ಎಂಬ ವಿಷಯದ ಮೇಲೆ ಮಾತನಾಡಿದ್ದು ನನಗೆ ಇನ್ನೂ ನೆನಪಿದೆ.

ಪಿಎಚ್. ಡಿ. ಮಾರ್ಗದರ್ಶನದ ಹಂತದಲ್ಲಿ ಮಾತ್ರ ಅವರು ಬಲು ಕಟ್ಟುನಿಟ್ಟಾಗಿ, ನಿಷ್ಠುರವಾಗಿ ಇರುತ್ತಿದ್ದರು. ಅವಶ್ಯಕ ನಿಯಮಗಳಲ್ಲಿ ಕೂಡ್ರುವ ಯಾವ ವಿದ್ಯಾರ್ಥಿಯೂ ಪ್ರವೇಶ ಬಯಸಿ ಅವರನ್ನು ಕಂಡಾಗ, ಆತನ ಕಾರ್ಯಕ್ಷಮತೆಯನ್ನು ಕೂಲಂಕಷವಾಗಿ ವರೆಗೆ ಹಚ್ಚಿ ನೋಡುತ್ತಿದ್ದರು. ಒಂದು ವೇಳೆ ಆತನು ತನ್ನ ಮುಂದಿಟ್ಟುಕೊಂಡಿದ್ದ ವಿಷಯ ಆತನಿಗೆ ಸರಿಯಾಗಿ ಒಗ್ಗುವಂತೆ ತೋರದಿದ್ದರೆ ಪರ್ಯಾಯ ವಿಹಯೆಗಳನ್ನು ಸಮಸ್ಯೆಗಳನ್ನು ಸೂಚಿಸಿ, ಅವುಗಳಲ್ಲಿ ಒಂದನ್ನು ಆರಿಸಿಕೊಂಡು ಇನ್ನೊಮ್ಮೆ ಬಂದು ಅವರನ್ನು ಕಾಣಲು ಸೂಚಿಸುತ್ತಿದ್ದರು. ವಿಷಯ ಆರಿಸಿಕೊಂಡು ಬಂದ ವಿದ್ಯಾರ್ಥಿಗೆ ಹಲವು ಸೂಚನೆಗಳನ್ನೂ, ಸಂಶೋಧನೆಗೆ ಸಂಬಂಧಿಸಿದ ರೀತಿ–ವಿಧಾನಗಳನ್ನೂ ಸ್ಥೂಲವಾಗಿ ವಿವರಿಸಿ ಆ ವಿಷಯದ, ಸಮಸ್ಯೆಯ ಬಗ್ಗೆ ನಾಲ್ಕಾರು ಪುಟದಷ್ಟು ನಿಬಂಧವೊಂದನ್ನು ಬರೆದು ತರಲು ಹೇಳುತ್ತಿದ್ದರು; ಹಾಗೆ ಬರೆದು ತಂದ ಲೇಖನ ಸರಿ ಕಂಡರೆ ಮಾತ್ರ ಆತನ ಪ್ರವೇಶಕ್ಕೆ ಒಪ್ಪಿಗೆ ನೀಡುತ್ತಿದ್ದರು. ಒಪ್ಪಿಗೆ ಪಡೆದು ಮುಂದೆ ಅಧ್ಯಯನ ನಡೆಸಿದ ವಿದ್ಯಾರ್ಥಿಯಿಂದ ನಿಯಮಿತತನ ಗಾಢ ಪರಿಶ್ರಮ ಮತ್ತು ಕರ್ತವ್ಯನಿಷ್ಠೆಗಳನ್ನು ಅಪೇಕ್ಷಿಸುತ್ತಿದ್ದರು. ಹೀಗಾಗಿ ಜಾಣ ಮತ್ತು ಗಾಢ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಷ್ಟೇ ಈ ಸಂಶೋಧನ ದಾರಿಯಲ್ಲಿ ತಡೆಯುತ್ತಿದ್ದರು. ಅನೇಕರು ಹೊರಳಿ ಬರುತ್ತಿರಲೇ ಇಲ್ಲ.

ಅಂತೆಯೆ ಹಲವಾರು ಬಾರಿ “ ಡಾ. ಉಪಾಧ್ಯೆಯವರಿಗೆ ಪಿಎಚ್. ಡಿ. ವಿದ್ಯಾರ್ಥಿಗಳೇ ಇಲ್ಲ” ಎಂಬ ಗುಜುಗುಜು ಮಾತು ಕೆಲವೆಡೆ ಕೇಳಬರುತ್ತಿತ್ತು. ಅಷ್ಟೇ ಏಕೆ, “ ಡಾ. ಉಪಾಧ್ಯೆ ಅವರೂ ಮದ್ರಾಸ

ವಿಶ್ವವಿದ್ಯಾಲಯದ ಡಾ. ವ್ಹಿ. ರಾಘವನ್ ಅವರೂ ಒಂದೇ" ಎಂಬುದಾಗಿ ಹಲವು "ಲಬ್ದ ಪ್ರತಿಷ್ಠಿತರು " ಆಡಿದ್ದುಂಟು. ಆದರೆ ಇಂಥ ಮಾತಿನಲ್ಲಿ ಹುರುಳಿರಲಿಲ್ಲ ಎಂಬ ಸತ್ಯವನ್ನು ನಾನು ನನ್ನ ಅನುಭವದಿಂದ ಎದೆ ತಟ್ಟಿ ಹೇಳಬಲ್ಲೆನು. ಡಾ. ಉಪಾಧ್ಯೆ ಅವರು ವಿದ್ಯಾರ್ಥಿಗಳಿಗೆ ಸಾಕಷ್ಟು ಉತ್ತೇಜನ ಕೊಡುತ್ತಿದ್ದರು. ನಾನೇನು ಅವರ ಕೈಯಲ್ಲಿ ಪಿಎಚ್. ಡಿ ಮಾಡತ್ತಿರಲಿಲ್ಲ. ಆದರೂ ನಾನು ಧಾರವಾಡದಲ್ಲಿದ್ದರೂ "ವಡ್ಡಾರಾಧನೆ" ಗೆ ಸಂಬಂಧಿಸಿದ ಕೆಲವು ಕ್ಲಿಷ್ಟ ಸಮಸ್ಯೆಗಳ ಬಗ್ಗೆ ಅವರ ಆತ್ಮೀಯ ಮತ್ತು ಸರ್ಮಪಕ ಮಾರ್ಗದರ್ಶನ ಪಡೆದಿದ್ದೇನೆ. ನಾನು ಪಿಎಚ್.ಡಿ. ಪದವಿ ಪಡೆದ ಮೇಲೂ, ನನ್ನ ಇತರ ಸಂಶೋಧನ ಸಮಸ್ಯೆಗಳನ್ನು ಕುರಿತು ಅವರ ಮಾರ್ಗದರ್ಶನ ಪಡೆಯುತ್ತ ಬಂದಿದ್ದೇನೆ. ನಮ್ಮಿಬ್ಬರಲ್ಲಿಯ ಈ ಪ್ರಕಾರದ ಗುರು–ಶಿಷ್ಯ ಸಂಬಂಧ ಅವರು ಜೀವಿಸಿ ಇರುವವರಿಗೂ ಸಾಗಿತ್ತು. ಇದಕ್ಕೆ ಒಂದು ನಿರ್ದಿಷ್ಠ ಕ್ರಮವಿದ್ದಿತು : ಪೂರ್ವಭಾವಿಯಾಗಿ ಅವರಿಗೆ ಪತ್ರ ಬರೆದು ನನ್ನ ಸಮಸ್ಯೆಯ ರೂಪರೇಷೆಯನ್ನು, ಉದ್ದೆಶವನ್ನು ತಿಳಿಸಿ, ಅವರು ಸುಚಿಸಿದ ದಿನದಂದು ಕೊಲ್ಲಪುರದ (ಮುಂದೆ ಮೈಸೂರಿನ) ಅವರ ನಿವಾಸಕ್ಕೆ ಸರಿಯಾಗಿ ಹೋಗುತ್ತಿದ್ದೆನು. ಅವರು ಆ ಬಗ್ಗೆ ಮೊದಲೇ ವಿಚಾರ ಮಾಡಿ, ಒಂದು ಕಾಗದದ ಮೇಲೆ ಕೆಲವು ಟಿಪ್ಪಣಿಗಳನ್ನು ಬರೆದು ಇಡುತ್ತಿದ್ದರು. ನಾನು ಅಲ್ಲಿ ಹೋದೊಡನೆ ಅವಶ್ಯಕ ಮುದ್ದೆಗಳನ್ನು ಚರ್ಚಿಸಿ ಹಲವು ಮೌಲಿಕ ಸೂಚನೆಗಳನ್ನು ಕೊಡುತ್ತಿದ್ದರು. ನಾನು ಅವನ್ನು ಅಭ್ಯಸಿಸಿ ಅದರಂತೆ ಬರೆದು ತಗೆದು ಇನ್ನೊಮ್ಮೆ ಹೋಗಿ ಅವರನ್ನು ಕಾಣತ್ತಿದ್ದೆನು. ಓದಿ ತಮ್ಮ ಸಂತೋಷಕ ವ್ಯಕ್ತ ಮಾಡುತ್ತಿದ್ದರು. ಒಮ್ಮೊಮ್ಮೆ ಆ ಬರಹದಲ್ಲಿ ಸಮಸ್ಯಾಪುರ್ತಿಗೆ ತಕ್ಕ ಬಲವಾದ ಆಧಾರಗಳನ್ನು ಕೊಡುವ ರೀತಿ ಸರಿಯಾಗಿಲ್ಲವೆಂದು ಹೇಳಿ, ಉದಾಹರಣೆಗೆ ಒಂದೆರಡನ್ನು ಅಲ್ಲೇ ತಿದ್ದಿ ತೋರಿಸುತ್ತಿದ್ದರು. ಅಥವಾ ತರುವಾಯ ಹಾಗೆ ತಿದ್ದಿ ಅಂಚೆಯ ಮುಖಾಂತರ ಕಳಿಸುತ್ತಿದ್ದರು. ಇಂಥ ಕೆಲವನ್ನು ನಾನು ಇನ್ನೂ ಕಾಯ್ದಿಟ್ಟಿದ್ದೇನೆ. ಅಂಥ ಯಾವುದಾದರೊಂದು ಸಂಶೋಧನ ಲೇಖನ ಪ್ರಕಟವಾದ ಮೇಲೆ, ನಾನು ಅದರ ಅಧಿಕೃತ ಪ್ರತಿಯೊಂದನ್ನು ಅವರಿಗೆ ಕಳಿಸುತ್ತಿದ್ದೆ. ಅದನ್ನು ಓದಿ ನೋಡಿ, ಸಂತೋಷಪಟ್ಟು ನನಗೆ ಪತ್ರ ಬರೆದು ಧನ್ಯವಾದಗಳನ್ನೂ ಕೊಡುತ್ತಿದ್ದರು. ಚಿಕ್ಕಪುಟ್ಟ ಶಂಕೆಗಳನ್ನೆತ್ತಿ ಪತ್ರ ಬರೆದಾಗ, ಅವನ್ನು ಆಗಲೇ ಅಂಚೆಯ ಮುಖಾಂತರವೇ ಬಗೆಹರಿಸುತ್ತಿದ್ದರು. ಅಂಥ ಕೆಲ ಪತ್ರಗಳನ್ನು ನಾನು ಇಂದಿಗೂ ಸುರಕ್ಷಿತವಾಗಿ ಇಟ್ಟಿದ್ದೇನೆ. ಇಂಥ ಉತ್ತೇಜನೆ ನನ್ನನ್ನು ಸಂಶೊಧನ ಕಾರ್ಯಕ್ಕೆ ಮತ್ತಿಷ್ಟು

ಹುರಿದುಂಬಿಸುತ್ತಿತ್ತು. ಅಲ್ಲದೆ ಅದು ನನ್ನಲ್ಲಿ ದೂರಗಾಮಿಯಾದ ಹಿತಕರ ಪರಿಣಾಮವನ್ನುಂಟು ಮಾಡಿತೆಂದು ಹೇಳಲು ಅಭಿಮಾನವೆನಿಸುತ್ತದೆ.

ಭಾರತದ ಅನೇಕ ವಿಶ್ವವಿದ್ಯಾಲಯಗಳೊಡನೆ ಮತ್ತು ಪಶ್ಚಿಮಾತ್ಯ ರಾಷ್ಟ್ರಗಳ ಹಲವು ವಿಶ್ವವಿದ್ಯಾಲಯಗಳೊಡನೆ ನಿಕಟ ಸಂಬಂಧ ಹೊಂದಿದ್ದ ಡಾ. ಉಪಾಧ್ಯೆಯವರು, ಇಲ್ಲಿಯ ಇಂದಿನ ಪೀಳಿಗೆಯಲ್ಲಿ ಸಂಶೋಧನದ ಮಟ್ಟ ಕಳೆದರ್ಜೆಗೆ ಹೋಗಿದೆಯೆಂಬುದರ ಬಗ್ಗೆ ತಮ್ಮ ಅನುಭವದಿಂದ ಅರಿತು, ಬಹಳ ವ್ಯಥೆ ಪಟ್ಟದ್ದುಂಟು ; ಹಲವು ಸಭೆ–ಸಮ್ಮೇಲನಗಳಲ್ಲಿ ನಿಸ್ಪೃಹವಾಗಿ ವ್ಯಕ್ತಮಾಡಿದ್ದುಂಟು. ಅವರ ಒಂದೆಡೆಗೆ ಬರೆದಿದ್ದಾರೆ :

**“ I am not a Cynic. But I do feel that a generation of Scholars to which a few (like Dr. P.L. Vaidya, Dr. V. S. Sunthanakar etc.) belonged is not being suitably replaced now etc …”**

“ನಾನು ಸರ್ವದ್ವೇಷಿ ಸ್ವಭಾವದವನಲ್ಲ. ಆದರೆ ನನಗೆ ನಿಶ್ಚಿತವಾಗಿ ಎನಿಸುವದ್ದೇನೆಂದರೆ ಹಲವು (ಡಾ. ಪಿ. ಎಲ್. ವೈದ್ಯ, ಡಾ. ವ್ಹಿ. ಎಸ್. ಸುಂಠಣಕರ ಇತ್ಯಾದಿ) ವಿದ್ವಾಂಸರನ್ನೊಳಗೊಂಡಿದ್ದ ಮೊದಲನೇ ಪೀಳಿಗೆಯ ಸ್ಥಾನವನ್ನು ಸರಿಯಾಗಿ ತುಂಬುವಂಥ ವಿದ್ವಾಂಸರು ಇಂದು ಹೊರಡುತ್ತಿಲ್ಲ.” ಇದು ಇಂದಿನ ದಿನಗಳಲ್ಲಿ ಪಿಎಚ್.ಡಿ. ಪದವಿಯನ್ನು ಪಡೆದ ವಿದ್ವಾಂಸರನ್ನು ಕುರಿತು ಎಂಬುದನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಸ್ಥಿತಿಗೆ ಅವರು ಕಾರಣವನ್ನೂ ಕೊಡುತ್ತಿದ್ದರು. “ ಈಗಿನ ಹಲವು ವಿದ್ವಾಂಸರು ಪಿಎಚ್.ಡಿ. ಪದವಿಯನ್ನು ಪಡೆದ ತರುವಾಯ, ಮೋಕ್ಷಪ್ರಾಪ್ತಿಯಾದಂತೆ ಭಾವಿಸಿ, ಮುಂದೆ ತಮ್ಮ ಕ್ಷೇತ್ರದಲ್ಲಿ ಅಧ್ಯಯನ ಸಂಶೋಧನೆಗಳ ಗೋಜಿಗೆ ಹೋಗುವದಿಲ್ಲವಾದುದರಿಂದ ಈ ಸ್ಥಿತಿ ನಿರ್ಮಾಣವಾಗುತ್ತಿದೆ. ಆದ್ದರಿಂದ ನಿಜವಾಗಿ ಪಿಎಚ್.ಡಿ. ಪದವಿ ಸಂಶೋಧನಾ ವ್ಯಾಸಂಗದ ಅರ್ಹತೆಯ ಬಗ್ಗೆ ಕೊಟ್ಟ ಸರ್ಟಿಫಿಕೇಟು ಮಾತ್ರ ಎಂದು ಅವರು ಬಗೆಯುತ್ತಿದ್ದರು. ಸತ್ವಯುತವಾದ ಸಂಶೋಧನೆ ಅಥವಾ ತನ್ನ ಕ್ಷೇತ್ರಕ್ಕೆ ಮೂಲಭೂತವಾದ ಅಥವಾ ಮೌಲಿಕವಾದ ಕೊಡುಗೆ ಸಲ್ಲಿಸುವ ಅರ್ಹತೆ, ಪಿಎಚ್. ಡಿ. ಪದವಿ ಪಡೆದ ತರುವಾಯದ ದೀರ್ಘ ಪ್ರಯತ್ನ ಮತ್ತು ಪರಿಶ್ರಮದಿಂದಲೇ ಸಾಧ್ಯ ಎಂದು ಅವರು ಹೇಳುತ್ತಿದ್ದರು. ಅದೇ ಪಿಎಚ್.ಡಿ. ಪಡೆದ ನಾಗಪುರ

ವಿಶ್ವವಿದ್ಯಾಲಯದ ನನ್ನ ಮಿತ್ರರೊಬ್ಬರು ಡಾ. ಉಪಾಧ್ಯೆಯವರಿಗೆ ಹರುಷದಿಂದ ಬರೆದ ಪತ್ರಕ್ಕೆ ಉತ್ತರವಾಗಿ ಅವರು ಹೀಗೆ ಬರೆದಿದ್ದಾರೆ.

**" Please accept my sincere greetings on your having secured the Doctorate Degree of Vidyadaya University of Ceylon. It's relief that your labours are justly rewarded. May I say a word more? The Ph.D. Degree is after all a certificate of a learned body that one is capable of systematic and scientific study; and the value of his degree, obviously depends on what work we turn out after having secured this degree. I am sure you will go on steadily working and enriching the field of researches in Shremanology".**

"ಸಿಲೋನಿನಲ್ಲಿಯ ವಿದ್ಯೋದಯ ವಿಶ್ವವಿದ್ಯಾಲಯದಿಂದ ಪಿಎಚ್. ಡಿ. ಪದವಿಯನ್ನು ಗಳಿಸಿದ ನಿಮಗೆ ನನ್ನ ಹಾರ್ದಿಕ ಧನ್ಯವಾದಗಳು. ನಾನು ಇನ್ನೊಂದು ಮಾತನ್ನು ಹೆಳಬಹುದೆ ? ಹಾಗೆ ನೋಡಿದರೆ ಪಿಎಚ್.ಡಿ. ಪದವಿ ಎಂಬುದು ಒಬ್ಬ ವ್ಯಕ್ತಿ ಶಿಸ್ತುಬದ್ದವಾದ ಮತ್ತು ಶಾಸ್ತ್ರೀಯ ಅಧ್ಯಯನಕ್ಕೆ ಅರ್ಹ ಎಂದು ಒಂದು ವಿಶಿಷ್ಟ ವಿದ್ವತ್ ಮಂಡಳಿಯಿಂದ ಕೊಡಮಾಡಿದ ಸರ್ಟಿಫಿಕೇಟು ಮಾತ್ರ ; ಅಲ್ಲದೆ ಈ ಪದವಿಯ ಬೆಲೆ ನಿಜವಾಗಿ ನಾವು ತರುವಾಯ ಯಾವ ಪ್ರಕಾರದ ಕಾರ್ಯ ಮಾಡುವೆವೆಂಬುದರ ಮೇಲೆ ಅವಲಂಬಿಸಿರುತ್ತದೆ. ಆದ್ದರಿಂದ ನೀವು ಇನ್ನು ಸ್ಥೈರ್ಯದಿಂದ ಮುಂದಿನ ಅಧ್ಯಯನ ಸಾಗಿಸುತ್ತ ಶ್ರವಣಶಾಸ್ತ್ರದ ಸಂಶೋಧನೆ ಕ್ಷೇತ್ರವನ್ನು ಶ್ರೀಮಂತಗೊಳಿಸುವಿರೆಂದು ನನಗೆ ವಿಶ್ವಾಸವಿದೆ."

ಸ್ನಾತಕೋತ್ತರ ಮಟ್ಟದಲ್ಲಿ ಉಚ್ಚಕೋಟಿಯ ಅಧ್ಯಯನ-ಅನುಸಂಧಾನ ಪಿಎಚ್. ಡಿ; ಡಿ. ಲಿಟ್ ಪ್ರಾಪ್ತಿತರುವಾಯ ಹಲವು ದಶಕಗಳ ವರೆಗೆ ಸಂಶೋಧನ ಕಾರ್ಯ, ಅತುಲನೀಯ ಸಾಧನೆ-ಇವೆಲ್ಲವುಗಳಿಗೆ ಡಾ. ಉಪಾಧ್ಯೆಯವರೇ ಆದರ್ಶ ಉದಾಹರಣೆಯಾಗಿದ್ದಾರೆ. ಈ ಸಂದರ್ಭದಲ್ಲಿ ಅವರ ಬಗ್ಗೆ ನಡೆದ ಒಂದು ಮಹತ್ವದ ಸಂಗತಿಯನ್ನು ಉಲ್ಲೇಖಿಸಬಹುದಾಗಿದೆ. ಡಾ. ಉಪಾಧ್ಯೆ ಅವರು ಪಿಎಚ್.ಡಿ. ಪದವಿಗಾಗಿ ಮುಂಬಯಿ ವಿಶ್ವವಿದ್ಯಾಲಯಕ್ಕೆ ತಮ್ಮ 'ಪ್ರವಚನ ಸಾರ' ಎಂಬ ವಿಮರ್ಶಾತ್ಮಕವಾಗಿ ಸಂಪಾದಿಸಿದ ಪ್ರಾಕೃತ ಅಧಿಕೃತ ಆಗಮ ಗ್ರಂಥವನ್ನು ಮಹಾಪ್ರಬಂಧವನ್ನಾಗಿ ಸಲ್ಲಿಸಿದ್ದರು. ಈ ಕೃತಿಯ ಮೂವರು ಪರೀಕ್ಷಕರಲ್ಲಿ ಜರ್ಮನಿಯ ಬಾನ್ ವಿಶ್ವವಿದ್ಯಾಲಯದ ಪ್ರಸಿದ್ಧ ವಿದ್ವಾಂಸರಾದ ಪ್ರೊ. ಶೂಬ್ರಿಂಗರೂ ಒಬ್ಬರಾಗಿದ್ದರು. ಈ ಮಹಾಪ್ರಬಂಧದ ಬಗ್ಗೆ ತಮ್ಮ ನಿರ್ಣಾಯಕ ವರದಿಯನ್ನು ಮುಂಬಯಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದಾಗ ಈ

ಮಹಾಪ್ರಂಧವು ಅತ್ಯಂತ ಉಚ್ಚಮಟ್ಟದ್ದೂ ಮೌಲಿಕವೂ ಇದ್ದಕಾರಣ, ಇದು ಡಿ.ಲಿಟ್. ಪದವಿಯನ್ನು ಪಡೆಯಲು ಸರ್ವಥಾ ಅರ್ಹ ಅಂತಾ ಶಿಫಾರಸು ಮಾಡಿದರು. ವಿಶ್ವವಿದ್ಯಾಲಯ ಅದನ್ನು ಮನ್ನಿಸಿ ಪ್ರಾ. ಉಪಾಧ್ಯೆ ಅವರಿಗೆ ಡಿ. ಲಿಟ್. ಪದವಿಯನ್ನು ಕೊಟ್ಟು ಅಪೂರ್ವವಾಗಿ ಸನ್ಮಾನಿಸಿತು.

ಈ ಪವಾಡಸದೃಶ ಘಟನೆ ತಾನಾಗಿಯೇ ನಡೆದದ್ದು **1939** ರಲ್ಲಿ, ಅದರ ತರುವಾಯ ಅವರು **1975** ರ ವರೆಗೆ ಕೆಲಸ ಮಾಡಿ ತಮ್ಮ ಸಂಶೋಧನ ಕ್ಷೇತ್ರವನ್ನು ಎಷ್ಟೊಂದು ಶ್ರೀಮಂತಗೊಳಿಸಿದರೆಂಬುದನ್ನು ನೋಡುವಾ.

**2.** ಸಂಶೋಧನ, ಲೇಖನ, ಗ್ರಂಥ ಸಂಪಾದನ ಕ್ಷೇತ್ರ :

ಕೊಲ್ಹಾಪುರದ ರಾಜಾರಾಮ ಕಾಲೇಜಿನಲ್ಲಿ ಪ್ರಾಧ್ಯಾಪಕರಿರುವಾಗಲೇ ಡಾ. ಉಪಾಧ್ಯೆಯವರು ಈ ಕ್ಷೇತ್ರದಲ್ಲಿ ಹೆಚ್ಚಾಗಿ ಕಾರ್ಯ ಮಾಡಿದ್ದುಂಟು. ಕಾಲೇಜಿನಲ್ಲಿಯ ಅಧ್ಯಾಪನ, ಮಾರ್ಗದರ್ಶನ ಮೊದಲಾದ ಕೆಲಸಗಳನ್ನು ಮುಗಿಸಿಕೊಂಡು ಬಂದ ತರುವಾಯ, ಸಂಶೋಧನ, ಲೇಖನ ಮತ್ತು ಗ್ರಂಥ ಸಂಪಾದನ ಕಾರ್ಯ ಅವರ ಜೀವನದ ಆತ್ಯಂತ ನಿಕಟ ಭಾಗವೇ ಆಗಿತ್ತು. ಒಂದು ಬಗೆಯ ಬೌದ್ಧಿಕ ಹವ್ಯಾಸವೆಂದು ಹೇಳಲು ಅಡ್ಡಿಯಿಲ್ಲ. ಪ್ರತಿದಿನ ತಮ್ಮ ಬಿಡುವಿನ ಸಮಯವನ್ನು (ಮುಂಜಾನೆ, ಸಂಜೆ) ಮತ್ತು ದೀಪಾವಳಿ ಮತ್ತು ಬೇಸಿಗೆಯ ರಜಾ ದಿನಗಳನ್ನು ಈ ಕಾರ್ಯಕ್ಕಾಗಿ ನಿಯಮಿತವಾಗಿ ಉಪಯೋಗಿಸುತ್ತಿದ್ದರು.

ಅವರು ತಮ್ಮ ವ್ಯಾಸಂಗದ ಕೋಣೆಯಲ್ಲಿ ಪೂರ್ಣ ಮಗ್ನರಾಗಿರುತ್ತದ್ದರು. ತಾವು ಒಬ್ಬರೇ ಕೆಲಸ ಮಾಡುವದಲ್ಲದೆ, ಅನೇಕ ಬಾರಿ ಸಂಪಾದನ ಕಾರ್ಯದಲ್ಲಿ, ವಿಶೇಷವಾಗಿ ವಿವಿಧ ಹಸ್ತಲಿಖಿತಗಳ ಆಧಾರದಿಂದ ಪಾಠ್ಯವಸ್ತುವನ್ನು ನಿರ್ಣಯಿಸುವಾಗ ಒಬ್ಬ ಸಂಸ್ಕೃತ ಶಾಸ್ತ್ರಿಗಳನ್ನು ಬದಿಗೆ ಕೂಡ್ರಿಸಿಕೊಂಡು ಅವರೊಡನೆ ಚರ್ಚಿಸಿ, ಹಲವು ಟಿಪ್ಪಣಿಗಳನ್ನು ಬರೆದಿಡುತ್ತಿದ್ದರು. ತಮ್ಮ ಟೇಬಲ್ಲಿನ ಮೇಲೆ ಒಂದು ಬದಿಗೆ ನಿರ್ದಿಷ್ಟ ಪುಟಗಳ ಹೊಟ್ಟೆಯಲ್ಲಿ ಹೊರಗೆ ಇಣಿಕಿ ನೋಡುವ ಕಾಗದದ ತುಂಡುಗಳನ್ನು ಹೊಂದಿದ ಗ್ರಂಥರಾಶಿಯೊಂದಿಗೆ, ಇನ್ನೊಂದು ಬದಿಗೆ ಬಿಚ್ಚಿ ಒಂದರ ಮೇಲೆ ಒಂದಿಟ್ಟ ಹಲವು ಫಾಯಿಲುಗಳ ಸಮೂಹವನ್ನು ಇಟ್ಟುಕೊಂಡು ಕಾಗದ–ಲೆಕ್ಕಣಿಕೆಯೊಂದಿಗೆ ತಮ್ಮ ಅನುಸಂಧಾನ ಲೋಕದಲ್ಲೇ ಮುಳುಗಿಹೋಗುತ್ತಿದ್ದರು. ಈ ರೀತಿ ಪರಿಶ್ರಮ ವಹಿಸಿ ಅವರು ಮಾಡಿದ ಕಾರ್ಯ ಅಪಾರವಾಗಿದೆ ; ಉಚ್ಚಮಟ್ಟದ್ದಾಗಿದೆ. ಅನೇಕ ಭಾರತೀಯ ಮತ್ತು ವಿದೇಶೀಯ ವಿದ್ವಾಂಸರಿಂದ, ಪ್ರಸಿದ್ಧ ಸಂಶೋಧನ ಪತ್ರಿಕೆಗಳಿಂದ ಶ್ಲಾಘಿಸಲ್ಪಟ್ಟಿದೆ. ಈ ಕಾರ್ಯದ

ಮಾಧ್ಯಮವೂ ಹೆಚ್ಚಾಗಿ ಇಂಗ್ಲಿಷವಾಗಿದೆ ಎಂಬುದನ್ನು ಬೇರೆ ಹೇಳಬೇಕಾಗಿಲ್ಲ. ಈ ಕಾರ್ಯದ ವ್ಯಾಪ್ತಿ ವೈಖರಿ ಮತ್ತು ಗುಣಮಟ್ಟ ಯಾರನ್ನಾದರೂ ಬೆರಗುಗೊಳಿಸುವಂತಹದಾಗಿದೆ.

**(i)** ವಿದ್ವತ್ಪೂರ್ಣ ಪ್ರಸ್ತಾವನೆ, ಪ್ರಮಾಣಿಕ ಪಾಠ್ಯ ನಿರ್ಣಯ, ಅವಶ್ಯಕ ಟಿಪ್ಪಣಿ, ಅನುಬಂಧ ಇತ್ಯಾದಿಯುಕ್ತ ವಿಮರ್ಶಾತ್ಮಕವಾಗಿ ಸಂಪಾದಿಸಿದ ಗ್ರಂಥಗಳ ಸಂಖ್ಯೆ ಸುಮಾರು **30.**

**(ii)** ವಿವಿಧ ವಿಷಯಗಳ ಮೇಲೆ ಬರೆದ ಮತ್ತು ಖ್ಯಾತ ಸಂಶೋಧನ ಪತ್ರಿಕೆ, ಅಭಿನಂದನ ಗ್ರಂಥ, ಸಂಸ್ಮರಣೆ ಗ್ರಂಥ ಇತ್ಯಾದಿಗಳಲ್ಲಿ ಪ್ರಕಟವಾದ ಸಂಶೋಧನ ಲೇಖನಗಳು **195;** ಇವುಗಳಲ್ಲಿ ಕನ್ನಡದಲ್ಲಿ ಬರೆದವುಗಳು **18.**

**(iii)** ಭಾರತ ಮತ್ತು ವಿದೇಶಗಳಲ್ಲಿ ಪ್ರಸಿದ್ಧ ವಿದ್ವಾಂಸರಿಂದ ರಚಿಸಲ್ಪಟ್ಟ : ಸಂಪಾದಿಸಲ್ಪಟ್ಟ ಗ್ರಂಥಗಳ ಸಮೀಕ್ಷೆ **76.**

**(iv)** ಇತರ ವಿದ್ವಾಂಸರ ಗ್ರಂಥಗಳಿಗೆ ಬರೆದು ಮುನ್ನುಡಿಗಳು **14,**ಕನ್ನಡದಲ್ಲಿ **2.**

**(v)** ತಮ್ಮ ಪ್ರಮುಖ ಮಾನ್ಯ ಸಂಪಾದಕೀಯತ್ವದಲ್ಲಿ , ಕೆಲವು ಬಾರಿ ಒಬ್ಬಿಬ್ಬರು ಬೇರೆ ವಿದ್ವಾಂಸರೊಂದಿಗೆ, ಸಂಪಾದಿಸಲ್ಪಟ್ಟ ಗ್ರಂಥಗಳು **80,** ಕನ್ನರ್ಡದಲ್ಲಿ **5.** ಇವುಗಳಲ್ಲಿ ಭಾರತೀಯ ಜ್ಞಾನಪೀಠ ದಿಲ್ಲಿ, ಆಶ್ರಯದಲ್ಲಿ ಪ್ರಕಟವಾದವುಗಳು **50,** ಜೀವರಾಜ ಗ್ರಂಥಮಾಲೆ, ಸೊಲ್ಲಾಪುರ, ಮುಖಾಂತರ ಪ್ರಕಟವಾದವುಗಳು **30,** ಭಾರತೀಯ ವಿದ್ಯಾಭವನ ಮುಂಬಯಿ, ಪ್ರಾಕೃತ ಟೆಕ್ಸ್ಟ ಸೊಸಾಯಿಟಿ ಅಹಮ್ಮದಾಬಾದ್, ಇತ್ಯಾದಿಗಳ ಮುಖಾಂತರ ಪ್ರಕಟವಾದವುಗಳು **7.**

ಡಾ. ಉಪಾಧ್ಯೆಯವರಿಂದ ಸಂಶೋಧಿತ ಮತ್ತು ಸಂಪಾದಿತ ಅನೇಕ ಪ್ರಾಚೀನ ಪ್ರಾಕೃತ ಮತ್ತು ಸಂಸ್ಕೃತ ಗ್ರಂಥಗಳು ಪ್ರಪ್ರಥಮವಾಗಿ ಬೆಳಕನ್ನು ಕಂಡಿವೆ. ದೀರ್ಘ ಮತ್ತು ವಿದ್ವತ್ಪೂರ್ಣವಾಗಿ ಬರೆದ ಪ್ರಸ್ತಾವನೆ, ಗ್ರಂಥದ ಕರ್ತೃ, ಕಾಲ, ಶೈಲಿಗಳ ನಿರ್ಣಯ, ಪ್ರಾಮಾಣಿಕವಾಗಿ ಪುನರ್ರಚಿಸಿದ ಪಾಠ್ಯವಸ್ತು , ಅವಶ್ಯಕ ಅಂಶಗಳ ಮೇಲೆ ಕೊಟ್ಟ ಮಾರ್ಮಿಕ ಟಿಪ್ಪಣಿ ಇತ್ಯಾದಿಗಳು ಅವರ ಪ್ರಬುದ್ಧ ಸಂಶೋಧನ ಶೈಲಿಯ ವೈಶಿಷ್ಟ್ಯಗಳು. ಈ ಬಗ್ಗೆ ಹಲವು ಹಿರಿಯ ವಿಮರ್ಶಕ ವಿದ್ವಾಂಸರ ಬಾಯಿಂದಲೇ ಕೇಳುವುದು ಉಚಿತ :

ಡಾ. ವ್ಹಿ. ಎಸ್. ಅಗರವಾಲ (ಬನಾರಸ ಹಿಂದೂ ವಿಶ್ವವಿದ್ಯಾಲಯ) ಬರೆಯುತ್ತಾರೆ.

**“ Dr. Upadhye is a past-master in the art of critical editing . He combines in himself the learning of the Oriental Pandit and the argue-eyed critiacl faculty of the new scholar, with which he approaches his task.”**

“ ಡಾ. ಉಪಾಧ್ಯೆಯವರು ವಿಮರ್ಶಾತ್ಮಕ ಸಂಪಾದನ ಕಲೆಯಲ್ಲಿ ನಿಷ್ಣಾತ ಮತ್ತು ಪಾರಂಗತ ಮೇಧಾವಿಗಳಾಗಿದ್ದಾರೆ. ಅವರು ತಮ್ಮಲ್ಲಿ ಪೌರ್ವಾತ್ಯ ಪಂಡಿತನ ಜ್ಞಾನವನ್ನು ಆಧುನಿಕ ವಿದ್ವಾಂಸನ ಬಲು ಜಾಗರೂಕ ಕಣ್ಣಿನ ವಿಮರ್ಶಾ ಶಕ್ತಿಯನ್ನೂ ಅಳವಡಿಸಿಕೊಂಡಿದ್ದು, ಇವೆರಡರೊಂದಿಗೆ ತಮ್ಮ ಕಾರ್ಯಕ್ಕೆ ಕೈಹಾಕುತ್ತಾರೆ”.

ಅವರ “ ಬೃಹತ್ಕಥಾ ಕೋಶ”ದ ಬಗ್ಗೆ ಡಾ. ಸುನೀತಿಕುಮಾರ ಚಟರ್ಜಿ (ಕಲಕತ್ತಾ ವಿಶ್ವವಿದ್ಯಾಲಯ) ಅವರು ಹೀಗೆ ಬರೆದಿದ್ದಾರೆ :

**It is really a magnum opus for which any scholar may feel proud. The learned Introduction is a model of what an introduction should be. Your externsive learning and your prodiguous industry both elicit unstinted admiration”.**

“ಯಾವ ವಿದ್ವಾಂಸನೂ ಅಭಿಮಾನ ಪಡುವಂತಿರುವ ಈ ಕೃತಿ ಅತ್ಯಂತ ಮಹತ್ವದ್ದಾಗಿದೆ. ಇದರ ಪ್ರಸ್ತಾವನೆ, ಪ್ರಸ್ತಾವನೆ ಹೇಗೆ ಇರಬೇಕಂದು ತೋರಿಸಲು ಬರೆದಿಟ್ಟ ಆದರ್ಶವಾಗಿದೆ, ಮಾದರಿಯಾಗಿದೆ. ನಿಮ್ಮ ಅಪಾರ ಜ್ಞಾನ ಮತ್ತು ಅಗಾಧ ಪರಿಶ್ರಮ ಇವೆರಡೂ ಮಿತಿಯಲ್ಲಿ ಶ್ಲಾಘನೆಯನ್ನು ಪಡೆಯಲು ಅರ್ಹವಾಗಿವೆ. ”

ಅವರ “ಲೀಲಾವಈ ಕಹಾ” ದ ಬಗ್ಗೆ ಪ್ರೊ. ರೇನೋ (ಪ್ಯಾರಿಸ ವಿಶ್ವವಿದ್ಯಾಲಯ) ಭಂಡಾರಕರ ಓರಿಯಂಟಲ್ ಸಂಸ್ಥೆಯ ಸಂಶೋಧನ ಮುಖ ಪತ್ರದಲ್ಲಿ ಬರೆಯುತ್ತಾರೆ :

**“ It is superflous to recall that the entire work is executed by a master-hand. After so many other publications, which succed one another in a rapid rhythem, the edition of Lilavai firmly established the name to Dr. Upadye in the front rank of the present-day jaina and Prakrit acholars in India”.**

“ ಈ ಇಡೀ ಕೃತಿ ಒಬ್ಬ ನಿಷ್ಣಾತ ವಿದ್ವಾಂಸರಿಂದ ಕಾರ್ಯಾನ್ವಿತವಾಗಿದೆ ಎಂದು ಪುನರುಚ್ಚರಿಸುವದು ಅನಾವಶ್ಯಕ. ಒಂದನ್ನೊಂದು ಒಂದು ಲಯದಲ್ಲಿ ಬೆನ್ನಟ್ಟಿ ಬಂದ ಇತರ ಅನೇಕ ಗ್ರಂಥಗಳ ಪ್ರಕಟನೆಯ

ತರುವಾಯ, "ಲೀಲಾವಈ ಕಹಾ" ಗ್ರಂಥದ ಸಂಪುಟ, ಡಾ. ಉಪಾಧ್ಯೆಯವರ ಸ್ಥಾನವನ್ನು ಭಾರತದಲ್ಲಿ ಮುಂದಿನ ಪಂಕ್ತಿಯಲ್ಲಿದ್ದ ಇಂದಿನ ಜೈನ ಮತ್ತು ಪ್ರಾಕೃತ ವಿದ್ವಾಂಸರೊಂದಿಗೆ ಸ್ಥಿರವಾಗಿರಿಸಿದೆ".

ಈ ರೀತಿ ಅನೇಕ ದೇಶೀಯ ಮತ್ತು ವಿದೇಶೀ ವಿದ್ವಾಂಸರಿಂದ ಪ್ರಶಂಸಿಸಲ್ಪಟ್ಟ ಡಾ. ಉಪಾಧ್ಯೆಯವರ ಈ ಕೃತಿರತ್ನಗಳು ಜಗದಾದ್ಯಂತ ಪ್ರಸಿದ್ಧಿಪಡೆದವು. ಅದರ ಫಲವಾಗಿ ಅನೇಕ ಪದವಿ–ಪ್ರಶಸ್ತಿಗಳು, ಮಾನ ಸನ್ಮಾನಗಳು ಅವರನ್ನು ಹುಡುಕಿಕೊಂಡು ಬಂದವು. ಒಂದು ಕೃತಿಗೆ ಡಿ,ಲಿಟ್ ಪದವಿ ಸಿಕ್ಕರೆ, ಇನ್ನೊಂದಕ್ಕೆ ರಾಜ್ಯ ಪ್ರಶಸ್ತಿ, ಮತ್ತೊಂದಕ್ಕೆ ರಾಷ್ಟ್ರಪ್ರಶಸ್ತಿ, ಸಮುದಾಯ ಗುಣಕ್ಕೆ ರಾಷ್ಟ್ರಪತಿ, ಪ್ರಶಸ್ತಿ, ಅಖಿಲ ಭಾರತೆ ಸಂಗೋಷ್ಠಿ ಪರಿಷತ್ತುಗಳ ಅಧ್ಯಕ್ಷಪದ, ಸಾಹಿತ್ಯ ಸಮ್ಮೇಲನಗಳ ಸನ್ಮಾನ ಇತ್ಯಾದಿ, ಆದರೂ ಅವರು ಕೊನೆಯವರೆಗೂ ಒಬ್ಬ ನಮ್ರ, ನರಾಡಂಬರ, ನಿಷ್ಠಾವಂತ , ಸಂಶೋಧನ ಯೋಗಿಗಳಾಗಿ ಬಾಳಿದರು.

**3.** ಪರಿಷತ್ತು, ಸಮ್ಮೇಲನ, ಸಂಗೋಷ್ಠಿಗಳ ಕ್ಷೇತ್ರ :

ಡಾ. ಉಪಾಧ್ಯೆಯವರು ಅಧ್ಯಾಪನ, ಲೇಖನ, ಸಂಶೋಧನ ಮತ್ತು ಗ್ರಂಥ ಸಂಪಾದನ ಇವುಗಳಷ್ಟೇ ಮಹತ್ವವನ್ನು ವಿದ್ವಜ್ಜನರ ಪರಿಷತ್ತು, ಸಮ್ಮೇಲನ ಮತ್ತು ಸಂಗೋಷ್ಠಿಗಳಿಗೂ ಕೊಡುತ್ತಿದ್ದರು. ಇವುಗಳಲ್ಲಿ ಭಾಗ ವಹಿಸುವುದರಿಂದ ಅನೇಕ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ವಿದ್ವಜ್ಜನರ ಹೊಸ ವಿಚಾರಗಳನ್ನು, ಸಂಶೋಧನೆಯಲ್ಲಿನ ಹೊಸ ಅವಿಷ್ಕಾರಗಳನ್ನು ತಿಳಿದುಕೊಳ್ಳಲು ಅವಕಾಶವಾಗುತ್ತದೆಂದೂ, ತಮ್ಮಲ್ಲಿಯ ವಿಚಾರಗಳನ್ನು, ಸಂಶೋಧನ ಒಲವುಗಳನ್ನು ವ್ಯಕ್ತಪಡಿಸಿ ಅವುಗಳನ್ನು ತೂಗೆ ನೋಡಲು ಅನುವಾಗುತ್ತದೆಂದೂ ಅವರು ಬಲವಾಗಿ ನಂಬಿದ್ದರು. ಅವುಗಳಲ್ಲಿ ಸಾಧ್ಯವಾದಾಗಲೆಲ್ಲ ಸಕ್ರಿಯ ಭಾಗವಹಿಸುತ್ತಿದ್ದರು; ಅನೇಕ ಸಂಘಟನೆಗಳ ಕಾರ್ಯಕಾರಿ ಮಂಡಳಗಳ ಸದಸ್ಯರಾಗಿ ಅವುಗಳ ಪ್ರಗತಿಗೆ ಗತಿ ಕೊಡುತ್ತಿದ್ದರು.

ಅಖಿಲ ಭಾರತೀಯ ಪ್ರಾಚ್ಯ ವಿದ್ಯಾ ಪರಿಷತ್ತುಗಳಲ್ಲಿ (**All India Oriental Conferences**) ಸುಮಾರು ಮೂವತ್ತು ವರುಷಗಳ ಕಾಲ ಅವರು ಭಾಗವಹಿಸಿದ್ದರಲ್ಲದೆ, **1941** ರ ಹೈದ್ರಾಬಾದ ಅಧಿವೇಶನದ, ಪ್ರಾಕೃತ ಮತ್ತು ಜೈನ ವಿದ್ಯಾ ಶಾಖೆಯ ವಿಭಾಗೀಯ ಅಧ್ಯಕ್ಷರಾಗಿ ಅದರ ಪ್ರಗತಿಗೆ ಹೊಸ ತಿರುವು ಕೊಟ್ಟರು, ಮುಂದೆ **1966** ರಲ್ಲಿ ಈ ಪರಿಷತ್ತಿನ ಅಲೀಗಢ ಸಮಗ್ರ ಅಧಿವೇಶನದ ಅಧ್ಯಕ್ಷರಾಗಿ ಭಾರತೀಯ ವಿದ್ಯೆಯ, ಸಂಸ್ಕೃತ, ಪ್ರಾಕೃತ, ಪಾಲಿ ಸಾಹಿತ್ಯ, ಭಾಷೆಗಳ ಮತ್ತು ಅವುಗಳ ಸರಿಯಾದ

ಅಧ್ಯಯನದ ಮಹತ್ವವನ್ನು ಬಿಂಬಿಸಿದರು. ಅನೇಕ ವರುಷಗಳ ವರೆಗೆ ಈ ಪರಿಷತ್ತಿನ ಕಾರ್ಯನಿರ್ವಾಹಕ ಮಂಡಳದ ಜೆಷ್ಠ ಸದಸ್ಯರಾಗಿ, ಡಾ. ಆರ್. ಎನ್. ದಾಂಡೇಕರರ ಹೆಗಲಿಗೆ ಹೆಗಲು ಕೊಟ್ಟು ಅವರು ಕಾರ್ಯ ಮಾಡಿದ್ದರು.

ಮುಂದೆ ಪ್ರಾಕೃತ ಮತ್ತು ಜೈನ ವಿದ್ಯಕ್ಷೇತ್ರಕ್ಕೆ (**Prakrit and Jainology**) ಭಾರತದಲ್ಲಿಯ ವಿವಿಧ ಸಂಸ್ಥೆಗಳ ಆಶ್ರಯದಲ್ಲಿ, ಮುಂದಾಳುತನದಲ್ಲಿ, ಸ್ವತಂತ್ರ ಆಸ್ತಿತ್ವ ಸಿಕ್ಕಾಗ, ಅವರು ಅವುಗಳ ದಿಲ್ಲಿ, ಅಹಮ್ಮದಾಬಾದ, ಜೈಪುರ ಇತ್ಯಾದಿ ಅಖಿಲ ಭಾರತ ಮಟ್ಟದ ಅಧಿವೇಶನಗಳ ಅಧ್ಯಕ್ಷರಾಗಿ ಆಮಂತ್ರಿಸಲ್ಪಟ್ಟರು. ಅಲ್ಲಿ ಕೂಡಿದ ತರುಣ ವಿದ್ವಾಂಸರಿಗೆ ಪ್ರಾಕೃತ ಜೈನ ವಿದ್ಯೆಗಳ ಅಧ್ಯಯನದ ಫಲದಾಯಕ ಸೂತ್ರಗಳನ್ನು ಹೇಳಿಕೊಟ್ಟರು. ಇಂಥ ಪರಿಷತ್ತುಗಳ, ಸಂಗೋಷ್ಠಿಗಳ ಸಂಘಟಕರಿಗೆ ಮತ್ತು ಮಿರ್ದೇಶಕರಿಗೆ ತಮ್ಮ ಸಲಹೆ–ಸೂಚನೆಗಳನ್ನು ನೀಡಿದರು. ಹಲವು ಕಟುಸತ್ಯವನ್ನು ತೆರೆದು ತೋರಿಸಿ ತಪ್ಪುಗಳನ್ನು ತಿದ್ದಲೆತ್ನಿಸಿದರು. **1967**ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಶ್ರವಣಬೆಳಗೊಳ ಸಮ್ಮೇಳನದ ಅಧ್ಯಕ್ಷಪದವನ್ನಲಂಕರಿಸಿ ತಮ್ಮ ಹೊಸ ವಿಚಾರಗಳನ್ನು ಪ್ರಾಂಜಲ ಮನಸ್ಸಿನಿಂದ ವ್ಯಕ್ತಪಡಿಸಿದರು. **1971** ರಿಂದ **1975** ರ ವರೆಗೆ ದಕ್ಷಿಣ ಭಾರತ ಜೈನ ಸಭೆಯ ಅಧ್ಯಕ್ಷರಾಗಿ ಅದಕ್ಕೊಂದು ಹೊಸ ಅಸ್ತಿತ್ವ ಕಲ್ಪಿಸಿಕೊಟ್ಟರು. ಅನೇಕ ಸಾರೆ ಡಾ. ಉಪಾಧ್ಯೆಯವರು ಇಂಥ ಪರಿಷತ್ತು–ಸಂಗೋಷ್ಠಿ–ಸಭೆಗಳ ವೇದಿಕೆಯ ಮೇಲಿಂದ ವ್ಯಕ್ತಮಾಡಿದ ವಿಚಾರಗಳನ್ನು ಕೇಳುವ, ತಿಳಿದುಕೊಳ್ಳುವ ಭಾಗ್ಯ ನನಗೆ ಲಭಿಸಿತ್ತು. ಅದರ ಲಾಭ ನನಗೆ ಜೀವನದುದ್ದಕ್ಕೂ ಸಿಗುತ್ತ ಹೋಯಿತು.

ಡಾ. ಉಪಾಧ್ಯೆಯವರು ಅಂತರರಾಷ್ಟ್ರೀಯ ಮಟ್ಟದಲ್ಲಿ ಕೂಡ ಹಿಂದೆ ಬೀಳಲಿಲ್ಲ. **1971** ರಲ್ಲಿ ಪ್ರಾಚ್ಯ ವಿದ್ಯಾ ಪರಿಷತ್ತಿನ ಅಂತರರಾಷ್ಟ್ರೀಯ (**International Oriental Conference**) ಕೆನಬರಾ (ಆಸ್ಟ್ರೇಲಿಯಾ) ಅಧಿವೇಶನದಲ್ಲಿ ಭಾರತ ಸರಕಾರದ ನಿಯೋಜಿತ ವಿದ್ವಾಂಸರಾಗಿ ಭಾಗವಹಿಸಿದರು. **1973** ರಲ್ಲಿ ಇದೇ ಪರಿಷತ್ತಿನ ಪ್ಯಾರಿಸ್ (ಫ್ರಾನ್ಸ್) ಅಧಿವೇಶನದಲ್ಲಿ ತಮ್ಮ ವಿದ್ವತ್‌ಪೂರ್ಣ ಸಂಶೋಧನ ಪ್ರಬಂಧವನ್ನು ಮಂಡಿಸಿದರು. ಮೈಸೂರು ವಿಶ್ವವಿದ್ಯಾಲಯದಿಂದ ನಿವೃತ್ತರಾಗುವ ಕಾಲ ಸಮೀಪಿಸಿದಾಗಲೂ ಕೂಡ ಇಂಥ ಪರಿಷತ್ತುಗಳಲ್ಲಿ ಭಾಗವಹಿಸುವ ಅವರ ಉತ್ಸಾಹ ಕುಗ್ಗಿರಲಿಲ್ಲ. **1974** ರಲ್ಲಿ ಲೋವೇನ್ (ಬೆಲ್ಜಿಯಮ್) ಗೆ ಹೋಗಿ 'ವಿಶ್ವಧರ್ಮ ಮತ್ತು ಶಾಂತಿ' (**World Religion and Peace**)

ಸಮ್ಮೇಲನದಲ್ಲಿ ಭಾಗವಹಿಸಿದರು. ಈ ರೀತಿ ಭಾರತಕ್ಕೂ, ತಾವು ಕೆಲಸ ಮಾಡುತ್ತಿದ್ದ ವಿಶ್ವವಿದ್ಯಾಲಯಗಳಿಗೂ ಕೀರ್ತಿ ತಂದರು.

ಡಾ. ಉಪಾಧ್ಯೆಯವರು ಇಂಥ ಪರಿಷತ್ತು–ಸಮ್ಮೇಲನ–ಸಂಗೋಷ್ಠಿಗಳಲ್ಲಿ ಸಕ್ರಿಯ ಭಾಗವಹಿಸುತ್ತಿದ್ದರಲ್ಲದೆ, ತಮ್ಮ ಸಮೀಪದ ತರುಣ ವಿದ್ವಾಂಸರಿಗೂ, ಶಿಷ್ಯರಿಗೂ ಅವುಗಳ ಬಗ್ಗೆ ಪ್ರೇರಣೆ ನೀಡುತ್ತಿದ್ದರು. ಈ ಸಂದರ್ಭದಲ್ಲಿ ನನ್ನ ಅನುಭವವನ್ನೇ ವಿವರಿಸುವದು ಉಚಿತ. **1968** ರಲ್ಲಿ ಅಖಿಲ ಭಾರತೀಯ ಪ್ರಾಚ್ಯ ವಿದ್ಯಾ ಪರಿಷತ್ತಿನ ಕಲಕತ್ತಾ (ಬೆಳ್ಳಿ ಹಬ್ಬದ) ಅಧಿವೇಶನಕ್ಕೆ ನಾನು ಅವರ ಪ್ರೇರಣೆಯಿಂದಲೇ ಬರೆದ ಸಂಶೋಧನೆ ಲೇಖನ **" Observations on the Punyasrava Kathakosa"** "ಪುಣ್ಯಾಸ್ರವ ಕಥಾಕೋಶದ ಮೇಲಿನ ವಿಚಾರಗಳು" ಎಂಬ ತಲೆಬರಹದ ಪ್ರಬಂಧವನ್ನು ಕಳಿಸಿ, ಸದಸ್ಯತ್ವವನ್ನು ಪಡೆದು, ಕರ್ನಾಟಕ ವಿಶ್ವವಿದ್ಯಾಲಯಕ್ಕೆ ನನ್ನನ್ನು ಪ್ರತಿನಿಧಿಯಾಗಿ (ಡೆಲಿಗೇಟ್) ಕಳಿಸಬೇಕೆಂದು ವಿಜ್ಞಾಪನ ಪತ್ರ ಕಳಿಸಿದ್ದೆನು. ಆದರೆ ಯಾವುದೋ ಕಾರಣದಿಂದ ವಿಶ್ವವಿದ್ಯಾಲಯಕ್ಕೆ ಹಾಗೆ ಮಾಡಲು ಸಾಧ್ಯವಾಗಲಿಲ್ಲ. ನಿರಾಶನಾಗಿ, ಇದ್ದ ಸಂಗತಿಯನ್ನು ತಿಳಿಸಿ, ಡಾ. ಉಪಾಧ್ಯೆಯವರಿಗೆ ಪತ್ರ ಬರೆದೆ. ಅದಕ್ಕೆ ಅವರು ಮಾರುತ್ತರ ಬರೆದದ್ದು ಹೀಗೆ : ಇಂಥ ಸಂದರ್ಭದಲ್ಲಿ ನಿರಾಶೆಗೆ ಅವಕಾಶ ಕೊಡಬಾರದು. ನಿಮ್ಮ ಸಂಶೋಧನ ಲೇಖನವಂತೂ ಸ್ವೀಕೃತವಾಗಿದೆ; ಹಾಗೂ ಇಂಥ ಪರಿಷತ್ತುಗಳಿಗೆ ರೇಲ್ವೆರಿಯಾಯತಿ (ಅರ್ಧ ಹಾಸಲು) ದೊರೆಯುತ್ತದೆ. ನಿಮ್ಮ ಸಂಬಳದಿಂದ ತುಸು ಹಣವನ್ನು ತೆಗೆದು ಈ ಅಧಿವೇಶನದಲ್ಲಿ ಭಾಗವಹಿಸುವುದನ್ನು ಬಿಡಬೇಡಿರಿ. ಬಹುಮುಖ ಲಾಭಕ್ಕೆ ಎರವಾಗಬೇಡಿರಿ. ಈ ಹಣ ಎಂದೂ ವ್ಯರ್ಥವಾಗದು. ಮುಂದೆ ದ್ವಿಗುಣಿತವಾಗಿ ನಿಮಗೆ ತಿರುಗಿಬರುವುದು. ಇಂಥ ಅಧಿವೇಶನದಲ್ಲಿ ನಿಮ್ಮ ಸಂಶೋಧನ ಪ್ರತಿಭೆ ತೋರಿಸಿದರೆ, ನಿಮ್ಮ ವಿಶ್ವವಿದ್ಯಾಲಯವೂ ನಿಮಗೆ ಉತ್ತೇಜನ ಕೊಟ್ಟೀತು. ಬೇರೆ ವಿಶ್ವವಿದ್ಯಾಲಯಗಳಿಂದಲೂ ನಿಮಂತ್ರಣಗಳು ಬಂದಾವು".... ಇತ್ಯಾದಿಯಾಗಿ. ಈ ಪತ್ರವನ್ನೋದಿ ಎಲ್ಲಿಲ್ಲದ ಉತ್ಸಾಹ ಪಡೆದು, ಈ ಅಧಿವೇಶನಕ್ಕೆ ಹೋಗಿ ಯಶಸ್ವಿಯಾಗಿ ಭಾಗ್‌ವಹಿಸಿದೆನು. ಮುಂದೆ ಡಾ. ಉಪಾಧ್ಯೆಯವರು ಬರೆದ ಎಲ್ಲ ಮಾತುಗಳು ನಿಜವಾಗಿ ಪರಿಣಮಿಸಿದವು. ಸುಮಾರು ಇಪ್ಪತ್ತೈದು ವರುಷಗಳ ಕಾಲ ಇಡೀ ಭಾರತದ ಉದ್ದಗಲಗಳಲ್ಲಿ ಕೂಡಿದ ಅನೇಕ್ ಪರಿಷತ್ತು ಸಂಗೋಷ್ಠಿಗಳ ಅಧಿವೇಶನಗಳಲ್ಲಿ ಭಾಗವಹಿಸುತ್ತ ಬಂದೆನು. ಒಂದೆರಡು ಅಧಿವೇಶನಗಳ ವಿಭಾಗೀಯ ಅಧ್ಯಕ್ಷಪದವೂ ದೊರೆಯಿತು.

ಸಾಮಾನ್ಯವಾಗಿ ನನ್ನ ಕ್ಷೇತ್ರದಲ್ಲಿಯ ಎಲ್ಲ ರಾಷ್ಟ್ರೀಯ ಮಟ್ಟದ ವಿದ್ವಾಂಸರ ಪರಿಚಯವಾಯಿತು. ಪ್ರೊ. ಅಲ್ಸಡಾರ್ಫ್, ಪ್ರೊ . ಮೆಟ್ಟೆ, ಶ್ರೀಮತಿ ಡ್ಯೂಡ್‌ವಿಥ್ಸ್ ರಂಥ ವಿದೇಶೀ ವಿದ್ವಾಂಸರ ಸಂಪರ್ಕ ಲಭಿಸಿತು. ನಾನು ಡಾ. ಉಪಾಧ್ಯೆಯವರ ಶಿಷ್ಯನೆಂಬುದರಿಂದ ಅನೇಕರಿಗೆ ನನ್ನ ಬಗ್ಗೆ ಅದರ ಅಭಿಮಾನಗಳಿದ್ದದ್ದನ್ನು ಅರಿತು ಸಂತೃಪ್ತನಾದೆನು. ಇದೆಲ್ಲ ನನ್ನನ್ನು ನನ್ನ ಸಂಶೋಧನ ಮಾರ್ಗದಲ್ಲಿ ಹೆಚ್ಚು ಪರಿಪಕ್ವ ಮಾಡಿದವು .

**4.** ಸಂಸ್ಥಾಪನಾ ಕ್ಷೇತ್ರ :

ಪ್ರಾಕೃತ ಭಾಷೆ, ಸಾಹಿತ್ಯ ಮತ್ತು ಜೈನ ವಿದ್ಯೆಗಳ ಬಗ್ಗೆ ಅಪಾರ ಆಸಕಿ ಮತ್ತು ಅವುಗಳ ಪ್ರಗತಿಯ ಬಗ್ಗೆ ದೂರದರ್ಶಿತ್ವವನ್ನು ಹೊಂದಿದ ಡಾ. ಉಪಾಧ್ಯೆಯವರು ಅವುಗಳಿಗೆ ಕಾಲೇಜು, ವಿಶ್ವವಿದ್ಯಾಲಯ ಮತ್ತು ಸಂಶೋಧನ ಸಂಸ್ಥೆಗಳಲ್ಲಿ ಸ್ವತಂತ್ರ ಆಸ್ತಿತ್ವ ಕಲ್ಪಿಸಲು, ದೊರಕಿಸಲು ಬಹಳ ಪ್ರಯತ್ನ ಪಟ್ಟರು. ಆರಂಭದಿಂದ ಕೊಲ್ಲಾಪುರ ಸಂಸ್ಥಾನದ ಆಡಳಿತದಲ್ಲಿದ್ದ ರಾಜಾರಾಮ ಕಾಲೇಜಿನಲ್ಲಿ ಪ್ರಾಕೃತ, ಅರ್ಧಮಾಗಧಿಗೆ ಸ್ವತಂತ್ರ ವಿಭಾಗವನ್ನೇ (ಡಿಪಾರ್ಟಮೆಂಟ) ದೊರಕಿಸಿಕೊಂಡಿದ್ದರು. ಮುಂದೆ ಶಿವಾಜಿ ವಿಶ್ವವಿದ್ಯಾಲಯ ಉದಯವಾದ ಮೇಲೆ ಅದರ ಅಧೀನದಲ್ಲಿದ್ದ ಎಲ್ಲ ಕಾಲೇಜುಗಳಲ್ಲಿ ಪ್ರಾಕೃತಕ್ಕೆ ಸ್ವತಂತ್ರ ವಿಭಾಗವಿರುವಂತೆ ನೋಡಿಕೊಂಡರು. ಪ್ರಾಯಶ: ಭಾರತದ ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಇದೊಂದೇ ವಿಶ್ವವಿದ್ಯಾಲಯ ಇಂಥ ವ್ಯವಸ್ಥೆಗೆ ಅನುವು ಮಾಢಿಕೊಟ್ಟಿದೆ.

ಅಲ್ಲದೆ ಅವರು ಭಾರತದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಅಂದರೆ ಮುಂಬಯಿ, ಪುಣೆ, ನಾಗಪುರ್, ಧಾರವಾಡ ಮುಂತಾದ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ಮಟ್ಟದಲ್ಲಿ ಪ್ರಾಕೃತ ವಿಷಯದ ಅಭ್ಯಾಸ ಕ್ರಮವನ್ನು ರೂಪಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಿದ್ದುಂಟು. ವೈಶಾಲಿಯಂಥ ಪ್ರಾಕೃತ ಮತ್ತು ಜೈನ ವಿಧ್ಯೆಯ ಸಂಶೋಧನ ಸಂಸ್ಥೆಯನ್ನು ರೂಪಿಸುವಲ್ಲಿ, ಅದರಲ್ಲಿಯ ಸ್ನಾತಕೋತ್ತರ ಅಭ್ಯಾಸ ಕ್ರಮವನ್ನು ಪ್ರಪ್ರಥಮವಾಗಿ ನಿರ್ಧರಿಸುವದರಲ್ಲಿ ಪ್ರಮುಖ ಸಲಹೆಗಾರರಾಗಿ, ಕೊನೆಯವರೆಗೆ ಆ ಸಂಸ್ಥೆಯ ಆಡಳಿತದ ಸಲಹಾ ಸಮಿತಿಯ ಸದಸ್ಯರಾಗಿದ್ದರು.

ಮೈಸೂರು ವಿಶ್ವವಿದ್ಯಾಲಯದ ಸಂಸ್ಥಾಪಕ ಪ್ರಾಧ್ಯಪಕರಾಗಿ, ಆ ಪೀಠವನ್ನು ತುಸು ದಿನಗಳಲ್ಲಿಯ ಜೈನಶಾಸ್ತ್ರ–ಪ್ರಾಕೃತ ಅಧ್ಯಯನಗಳ ಪೂರ್ಣ ದರ್ಜೆಯ ವಿಭಾಗವಾಗುವಂತೆ ಹೆಣಗಿದರು. ಈ ಸ್ವತಂತ್ರ ವಿಭಾಗವು ಭಾರತದ ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಮೊದಲನೆಯದೂ, ಮಾದರಿಯದು ಆಯಿತು. ಇದರ

ಹೆಜ್ಜೆಯ ಮೇಲೆ ಹೆಜ್ಜೆ ಇಟ್ಟು ಕರ್ನಾಟಕ ವಿಶ್ವವಿದ್ಯಲಯ (ಧಾರವಾಡ) ಪತಿಯಾಳಾ ವಿಶ್ವವಿದ್ಯಾಲಯ (ಪಂಜಾಬ), ಸುಖಾಡಿಯಾ ವಿಶ್ವವಿದ್ಯಾಲಯ (ಉದಯಪುರ), ಮದ್ರಾಸ ವಿಶ್ವವಿದ್ಯಾಲಯ (ಮದ್ರಾಸ) ಮೊದಲಾದವುಗಳಲ್ಲಿ ಜೈನ ಶಾಸ್ತ್ರ–ಪ್ರಾಕೃತ ಅಧ್ಯಯನ ವಿಭಾಗಗಳು ತಲೆದೋರಿದವು.

**1968** ರಲ್ಲೇ ಯು. ಜಿ. ಸಿ. ಮಂಡಳಿಯನ್ನು ಸಕಾರಣದೊಂದಿಗೆ ಒಪ್ಪಿಸಿ, ಯು. ಜಿ. ನೆರವಿನಿಂದ ಪ್ರಪ್ರಥಮ ಪ್ರಾಕೃತ ಸಂಗೋಷ್ಠಿಯನ್ನು ಶಿವಾಜಿ ವಿಶ್ವವಿದ್ಯಾಲಯದಲ್ಲಿ ಪ್ರಾರಂಭಿಸಿದರು. ಈ ಸ್ವತಂತ್ರ ಪ್ರಾಕೃತ ಸಂಗೋಷ್ಠಿಯ ಅಲೆಗಳು ಅಂದರೆ ಮುಂದಿನ ಅಧಿವೇಶನಗಳು ಪುಣೆ, ಮುಂಬಯಿ ಮೊದಲಾದ ವಿಶ್ವವಿದ್ಯಾಲಯಗಳಲ್ಲಿ ಕಾಣಿಸಿಕೊಂಡವು. ಇತರ ಉಚ್ಚ ಶೈಕ್ಷಣಿಕ ಸಂಸ್ಥೆಗಳಿಗೂ ಮಾದರಿಯಾದವು. ಡಾ.